ಸಂಪುಟ 01 | ಸಂಚಿಕೆ 193 | ಸೋಮವಾರ 21 ಜೂನ್ 2026 | ಪುಟ 4 | ಬೆಲೆ–2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ಮಳೆಕಾಡು ದಿನ (World Rainforest Day) –

ಮಳೆಕಾಡುಗಳು, ಜೀವ ವೈವಿಧ್ಯತೆ ಮತ್ತು ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಆಚ–ರಿಸಲಾಗುತ್ತದೆ.

## ಸುಭಾಷಿತ

ಮನಸ್ಸು ಪರಿಶುದ್ಧವಾಗಿದ್ದರೆ, ಸಂತೋಷ ನೆರಳಿನಂತೆ ನಮ್ಮನ್ನ ಹಿಂಬಾಲಿಸುತ್ತದೆ.

– ಭಗವಾನ್ ಬುದ್ಧ

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587 9008787586




## ಈ ವರ್ಷದಿಂದಲೇ ವಿದ್ಯಾರ್ಥಿ ಸಂಘಟನೆ ಚುನಾವಣೆ ಮರು ಆರಂಭ : ಸಿಎಂ ಡಿ.ಕೆ. ಶಿವಕುಮಾರ್

ನೈಜ್ಯ ದೆಸೆ ನ್ಯೂಸ್



ಬೆಂಗಳೂರು :– ರಾಜ್ಯದ ಕಾಲೇಜುಗಳಲ್ಲಿ (College) ಕಳೆದ ಹಲವು ವರ್ಷಗಳಿಂದ ನಿಲ್ಲಿಸಲಾಗಿರುವ ವಿದ್ಯಾರ್ಥಿ ಸಂಘಗಳ ಚುನಾವಣೆಯನ್ನು (Student Election) ಇದೇ ವರ್ಷದಿಂದಲೇ ಪುನಃ ಆರಂಭಿಸುತ್ತೇವೆ, ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ (CM.DK Shivakuamr) ಅವರು ಭಾರಿ ಮಹತ್ವದ ಪ್ರಕಟಣೆ ಹೊರಡಿಸಿದ್ದಾರೆ.ಬೆಂಗಳೂ–ರಿನ ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಹಸ್ತಾಂತರಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಿಂದಲೇ ನಾಯಕತ್ವ ಗುಣಗಳನ್ನು ಬೆಳೆಸಲು ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ತಾವು ಮತ್ತು ಹರಿಪ್ರಸಾದ್ ಇಬ್ಬರೂ ಕಾಲೇಜು ದಿನಗಳಲ್ಲಿ ವಿದ್ಯಾರ್ಥಿ ನಾಯಕರಾಗಿಯೇ ಬೆಳೆದು ಬಂದಿರುವುದನ್ನು ಸ್ಮರಿಸಿದ ಸಿಎಂ, ಈ ನಿರ್ಧಾರದ ಮೂಲಕ ರಾಜ್ಯ ರಾಜಕಾರಣಕ್ಕೆ ಹೊಸ ಯುವ ನಾಯಕರನ್ನು ಪರಿಚಯಿಸಲು ಸರ್ಕಾರ ಮುಂದಾಗಿದೆ ಎಂಬ ದಿಕ್ಸೂಚಿ ನೀಡಿದರು.ಕೋವಿಡ್ ಕಷ್ಟದ ಕಾಲ ಹಾಗೂ ಜೂಮ್ ಕಾಲ್ ಪದಗ್ರಹಣದ ನೆನಪು! ತಮ್ಮ ಅಧಿಕಾರಾವಧಿಯ ಆರಂಭದ ದಿನಗಳನ್ನು ಮೆಲುಕು ಹಾಕಿದ ಡಿ.ಕೆ. ಶಿವಕುಮಾರ್, ನನಗೆ 2020 ರ ಮಾರ್ಚ್ 10 ರಂದು ಸೋನಿಯಾ ಗಾಂಧಿಯವರು ಕೆಪಿಸಿಸಿ ಅಧ್ಯಕ್ಷ ಜವಾಬ್ದಾರಿ ನೀಡಿದ್ದರು. ಆದರೆ ಅಂದು ಇವತ್ತಿನಂತೆ ಅದ್ದೂರಿಯಾಗಿ ಕಾರ್ಯಕ್ರಮ ಮಾಡಲು ಆಗಿರಲಿಲ್ಲ. ಕೊರೊನಾ ಕಾಲವಾಗಿದ್ದ–ರಿಂದ ಕೇವಲ ಜೂಮ್ ಕಾಲ್ (Zoom Call) ಮೂಲಕವೇ ನಾನು ಅಧಿಕಾರ ಸ್ವೀಕ–ರಿಸಬೇಕಾಯಿತು. ಅಂದಿನಿಂದ ಇಂದಿನವರೆಗೂ ನಿಮ್ಮೆಲ್ಲರ ವಿಶ್ವಾಸ, ಸಹಕಾರದಿಂದ ಪ್ರಾಮಾಣಿಕವಾಗಿ ಸೇವೆ ಮಾಡಿದ್ದೇನೆ. ನಾನು ಕೂಡ ಒಬ್ಬ ಸಾಮಾನ್ಯ ಮನುಷ್ಯ, ಸಂಘಟನೆಯ ಹಾದಿಯಲ್ಲಿ ನನ್ನ ಕೈಯಿಂದಲೂ ಅನೇಕ ತಪ್ಪುಗಳಾಗಿರಬಹುದು, ಎಂದು ಮುಕ್ತವಾಗಿ ಒಪ್ಪಿಕೊಂಡರು.ಮುಂದುವರಿದು ಮಾತನಾಡಿದ ಅವರು, ಕೋವಿಡ್ ಕಾಲದಲ್ಲಿ ಯಾರೂ ಮನೆಯಿಂದ ಹೊರಗೆ ಹೋಗದಂತಹ ಪರಿಸ್ಥಿತಿ ಇತ್ತು. ಅಂದು ಸಿದ್ದರಾಮಯ್ಯ ಅವರು ವಿಪಕ್ಷ ನಾಯಕರಾಗಿದ್ದರು, ಮಲ್ಲಿಕಾರ್ಜುನ ಖರ್ಗೆ ಅವರು ದೆಹಲಿಯಲ್ಲಿ ವಿಪಕ್ಷ ನಾಯಕರಾಗಿದ್ದರು ಮತ್ತು ಕೆ.ಸಿ. ವೇಣುಗೋಪಾಲ್ ಸಾಕ್ಷಿಯಾಗಿದ್ದರು. ನಾವೆಲ್ಲರೂ ಜೂಮ್ ಮೀಟಿಂಗ್‌ಗಳ ಮೂಲಕವೇ ಜನರ ಕಷ್ಟಗಳಿಗೆ ಸ್ಪಂದಿಸಿದೆವು. ಕೆಪಿಸಿಸಿ ವತಿಯಿಂದ ಕೋಟಿ ಕೋಟಿ ಹಣ ವೆಚ್ಚ ಮಾಡಿ ಬಡವರಿಗೆ ಫುಡ್ ಕಿಟ್ ನೀಡಿದೆವು. ವಲಸೆ ಕಾರ್ಮಿಕರು ಯಾದಗಿರಿ ಸೇರಿದಂತೆ ದೂರದ ಊರುಗಳಿಗೆ ಹೋಗಲು ತೊಂದರೆಯಾದಾಗ, ಕೆಪಿಸಿಸಿ ನಿಧಿಯಿಂದ 1 ಕೋಟಿ ರೂಪಾಯಿ ಚೆಕ್ ನೀಡಿ ಬಸ್ ಹಾಗೂ ರೈಲು ವ್ಯವಸ್ಥೆ ಮಾಡಿಸಿದೆವು. ಚಾಮರಾಜನಗರ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಅಂದು ಮಾತು ಕೊಟ್ಟಂತೆ ಇಂದು ನಮ್ಮ ಸರ್ಕಾರ ಬಂದ ಮೇಲೆ ಸರ್ಕಾರಿ ನೌಕರಿ ನೀಡಿದ್ದೇವೆ, ಎಂದು ಹೆಮ್ಮೆಯಿಂದ ಹೇಳಿದರು.ಬಿಜೆಪಿ ವಿರುದ್ಧದ ಐತಿಹಾಸಿಕ ಹೋರಾಟಗಳು ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್ ನಡೆಸಿದ ಸರಣಿ ಆಂದೋಲನಗಳನ್ನು ನೆನಪಿಸಿದ ಸಿಎಂ, ನಾವು ರೈತ ವಿರೋಧಿ ಕೃಷಿ ಕಾಯ್ದೆಗಳ ವಿರುದ್ಧ, ಬೆಲೆ ಏರಿಕೆ ವಿರುದ್ಧ ನಿರಂತರ ಹೋರಾಟ ಮಾಡಿದೆವು. ನಮ್ಮ ಹೋರಾಟದ ತೀವ್ರತೆಗೆ ಅಂದಿನ ಬಿಜೆಪಿ ಸರ್ಕಾರದ ಇಬ್ಬರು ಮಂತ್ರಿಗಳು ರಾಜೀನಾಮೆ ನೀಡಬೇಕಾಯಿತು. ಇದೇ ವೇಳೆ ಕೇಂದ್ರ ಸರ್ಕಾರ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ಇ.ಡಿ ತನಿಖೆ ಹೆಸರಲ್ಲಿ ತೀವ್ರ ಕಿರುಕುಳ ನೀಡಿತು. ಅದನ್ನೆಲ್ಲಾ ಪ್ರತಿಭಟಿಸಿ ನಾವು ರಸ್ತೆಗಿಳಿದೆವು. ಕೃಷ್ಣಾ–ಕಾವೇರಿ ನೀರಿಗಾಗಿ, ಮೇಕೆದಾಟು ಯೋಜನೆಗಾಗಿ ಭಾರಿ ಪಾದಯಾತ್ರೆ ಮಾಡಿದೆವು. ಅಂದು ಬಿಜೆಪಿ ಸರ್ಕಾರ ನಮಗೆ ಅನೇಕ ಅಡೆತಡೆಗಳನ್ನು ಉಂಟುಮಾಡಿತು, ಆದರೆ ಅದೆಲ್ಲಾ ಈಗ ಇತಿಹಾಸ, ಎಂದರು.ಪಂಚಾಯಿತಿಗೆ 5 ಜನ ಕಾರ್ಯಕರ್ತರ ಗ್ಯಾರಂಟಿ ಸಮಿತಿ! ಪಕ್ಷದ ಕಾರ್ಯಕರ್ತರಿಗೆ ತಳಮಟ್ಟದಲ್ಲಿ ಜವಾಬ್ದಾರಿ ನೀಡುವ ಕುರಿತು ಮಾತನಾಡಿದ ಡಿ.ಕೆ. ಶಿವಕುಮಾರ್ ಅವರು ಹೊಸದೊಂದು ಸಾಂಸ್ಥಿಕ ತೀರ್ಮಾನವನ್ನು ಪ್ರಕಟಿಸಿದರು. ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯಿತಿ ಹಾಗೂ ನಗರದ ಪ್ರತಿಯೊಂದು ವಾರ್ಡ್ ಮಟ್ಟದಲ್ಲಿ ಹೆಚ್ಚುವರಿಯಾಗಿ 5 ಜನ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರನ್ನು ಒಳಗೊಂಡ 'ಗ್ಯಾರಂಟಿ ಸಮಿತಿ'ಯನ್ನು ನೇಮಕ ಮಾಡಲು ಸರ್ಕಾರ ತೀರ್ಮಾನಿಸಿದೆ.ಸರ್ಕಾರದ ಮಹತ್ವಾಕಾಂಕ್ಷಿ ಐದು ಗ್ಯಾರಂಟಿ ಯೋಜನೆಗಳ ವ್ಯವಸ್ಥಿತ ಪರಿಷ್ಕರಣೆ, ಅರ್ಹರಿಗೆ ಯೋಜನೆ ತಲುಪಿಸುವುದು ಹಾಗೂ ಉಸ್ತುವಾರಿ ನೋಡಿಕೊಳ್ಳಲು ಈ ಕಾರ್ಯಕರ್ತರ ಪಡೆಯನ್ನು ಬಳಸಿಕೊಳ್ಳಲಾಗುವುದು ಎಂದು ಡಿಕೆ ಶಿವಕುಮಾರ್ ಹೇಳಿದರು.

## ಯೋಗ ಪ್ರಚಾರದ ವಾರ್ಷಿಕೋತ್ಸವ ಆಗದಿರಲಿ : ಕಲ್ಯಾಣಸ್ವಾಮಿಗಳು

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಯೋಗ ಪ್ರಚಾರ ವಾರ್ಷಿಕೋತ್ಸವವಾಗದೇ ದೈನಂದಿನ ನಿತ್ಯೋತ್ಸವವಾದಾಗ ಮಾತ್ರ ಉತ್ತಮ ಆರೋಗ್ಯ, ಸುಂದರ ಸಮಾಜ ನಿರ್ಮಾಣ ಸಾಧ್ಯವೆಂದು ಯೋಗ ಮತ್ತು ಅಧ್ಯಾತ್ಮಿಕ ಆರಾಧಕರಾದ ಕಮ್ಮರಚೇಡ್ ಮತ್ತು ಬಳ್ಳಾರಿ ಕಲ್ಯಾಣಸ್ವಾಮಿ ಸಂಸ್ಥಾನಮಠದ ಪೀಠಾಧಿಪತಿ ಕಲ್ಯಾಣಸ್ವಾಮಿ ತಿಳಿಸಿದರು. ಅವರು ಪಟ್ಟಣದ ಸಣಾಪುರ ರಸ್ತೆಯಲ್ಲಿರುವ ಕಂಪ್ಲಿ ತಾಲ್ಲೂಕು ವೀರಶೈವ ಸಂಘದ ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ಕಂಪ್ಲಿ ಪತಂಜಲಿ ಯೋಗಾ ಸಮಿತಿ ಭಾನುವಾರ ಏರ್ಪಡಿಸಿದ್ದ 12ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಸಾಮೂಹಿಕ ಯೋಗ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಆಧುನಿಕ ಜಗತ್ತಿನ ಒತ್ತಡದ ಜೀವನದಲ್ಲಿ ಕುಟ್ಟುವ, ರುಬ್ಬುವ, ಬೀಸುವ, ಮತ್ತು ದೈನಂದಿನ ಪ್ರಕೃತಿದತ್ತ ಕೆಲಸ ಕಾರ್ಯಗಳಿಂದ ವಿಮುಖರಾಗಿ ಪ್ರತಿಯೊಂದನ್ನು ಯಂತ್ರಗಳಿಂದ ಮಾಡಿಸುತ್ತಿರುವ ಕಾರಣ ಅನೇಕ ರೋಗರುಜಿನಗಳಿಗೆ ಈಡಾಗಬೇಕಿದೆ. ಕಲುಷಿತ ಮನಸ್ಸಿನಿಂದ ನಿರ್ಮಲ ಮನಸ್ಸನ್ನಾಗಿ ಪರಿವರ್ತಿಸಿಕೊಳ್ಳುವಲ್ಲಿ ಯೋಗ ಬಳಕೆಯಾಗಬೇಕಿದೆ. ಯೋಗಭ್ಯಾಸ ಆರಂಭ ಶೂರತ್ವವಾಗದೇ ನಿತ್ಯ ನಿರಂತರ ಆಚರಣೆಯಾಗಬೇಕು. ಜ್ಞಾನದೊಡನೆ,ಧ್ಯಾನ ಅಳವಡಿಸಿಕೊಳ್ಳುವಂತೆ ಯೋಗ ಮತ್ತು ಅಧ್ಯಾತ್ಮಿಕ ಚಿಂತನೆಗಳ ಬಗ್ಗೆ ವಿವರಿಸಿದರು.ಕಂಪ್ಲಿ ತಾಲ್ಲೂಕು ಪತಂಜಲಿ ಯೋಗ ಸಮಿತಿ ಪ್ರಭಾರಿ ಡಿ.ಮೌನೇಶ್ ಪ್ರಸ್ತಾವಿಕವಾಗಿ ಮಾತನಾಡಿ, ಕಳೆದ ಹಲವು ವರ್ಷಗಳಿಂದ ಪಟ್ಟಣವೂ ಸೇರಿದಂತೆ ತಾಲ್ಲೂಕಿನಾದ್ಯಂತ ನಮ್ಮ ಸಮಿತಿಯಿಂದ ನಿರಂತರ ಯೀಗ ಶಿಬಿರಗಳನ್ನು ಆಯೋಜಿಸಿ ಆರೋಗ್ಯವಂತ ಸಮಾಜದ ನಿರ್ಮಾಣದಲ್ಲಿ ತೊಡಗಿಸಿಕೊಂಡಿದೆ ಎಂದರು.ನಂತರ ಹೊಸಪೇಟೆಯ ಹಿರಿಯ ಯೋಗ ಶಿಕ್ಷಕ ಎಸ್.ಶ್ರೀಧರ ಯೋಗಾ ಸಾಧಕರು ಮತ್ತು ಸಾರ್ವಜನಿಕರಿಗೆ ಪ್ರಾತ್ಯಕ್ಷಿಕೆ ಮೂಲಕ ಮಹತ್ವದ ಯೋಗ ಆಸನಗಳನ್ನು ಕಲಿಸಿಕೊಟ್ಟರು.ಈ ಕಾರ್ಯಕ್ರಮದಲ್ಲಿ ಪತಂಜಲಿ ಯೋಗ ಸಮಿತಿ ಪದಾಧಿಕಾರಿಗಳು, ಮಹಿಳಾ,ಕಿಸಾನ್ ಸಮಿತಿ ಪದಾಧಿಕಾರಿಗಳು, ನಿತ್ಯ ಯೋಗ ಸಾಧಕರು, ವಿವಿಧ ಶಾಲೆ, ಕಾಲೇಜುಗಳ, ಹಾಸ್ಟೆಲುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.ಬ್ರೆಟ್‌ವೇ ಶಾಲೆ : ಇಲ್ಲಿನ ಬ್ರೆಟ್‌ವೇ ಶಾಲೆಯಲ್ಲಿ ಅಂತರಾಷ್ಟ್ರೀಯ ಯೀಗ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಂದ ಆಕರ್ಷಕ ಯೋಗ ಪ್ರದರ್ಶನ ಜರುಗಿತು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕರು, ಆಡಳಿತ ಮಂಡಳಿ ಪದಾಧಿಕಾರಿಗಳು ಭಾಗವಹಿಸಿದ್ದರು.

## ಮಲಿಯಾಬಾದ್ ವ್ಯಾಪ್ತಿಯಲ್ಲಿ ನಾಳೆ ಜೂನ್ 23ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್




ರಾಯಚೂರು ಜೂನ್ 20 (ಕರ್ನಾಟಕ ವಾರ್ತೆ): ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 1ರ ವ್ಯಾಪ್ತಿಯ 110 ಮೆಸ್ ಕೆ.ಪಿ.ಟಿ.ಸಿ.ಎಲ್ ಮಲಿಯಾಬಾದ್‌ನಲ್ಲಿ ತರ್ತು ನಿರ್ವಹಣೆ ಕಾಮಗಾರಿಯನ್ನು ಹಮ್ಮಿಕೊಂಡ ಪ್ರಯುಕ್ತ ಜೂನ್ 23ರ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.ಅಂದು ಬೆಳ್ಳಿಗೆಯಿಂದ ಅನುಷಾ ನಗರ, ಆರ್.ಓ.ಓ ಆಫೀಸ್, ಸತ್ಯನಾಥ ಕಾಲೋನಿ, ಜಹಿರಾಬಾದ್, ಮಂಗಲವಾರ್ ಪೇಟೆ, ಜಾನಿ ಮೊಹಲ್ಲಾ, ಜಿ.ಡಿ.ತೋಟ, ಗೀತಾ ಮಂದಿರ್, ಪಟೇಲ್‌ರೋಡ್, ಬ್ರೇಸ್ತ್ ವಾರಪೇಟೆ, ಪದ್ಮಾನಾಭ ಟಾಕೀಸ್, ನೇತಾಜಿ ನಗರ, ಅಶೋಕ್ ನಗರ, ಕೆ.ಎಸ್.ಆರ್.ಟಿ.ಸಿ. ಡಿಪೋ, ಬಿ.ಆರ್.ಬಿ. ಸರ್ಕಲ್, ಯರಗೇರಾ ಲೇಔಟ್, ಮೇತೊಡಿಸ್ಟ್ ಕಾಲೇಜ್, ಮಾರುತಿ ನಗರ, ಐಡಿಎಸ್‌ಎಮ್‌ಟಿ ಲೇಜೌಟ್, ಐಬಿ, ಜ್ಯೋತಿ ಕಾಲೋನಿ, ಎಸ್‌ಬಿಹೆಚ್ ಕಾಲೋನಿ, ಅಲ್ಲಮಪ್ರಭು ಲೇಔಟ್, ಆರ್.ಆರ್. ಕಾಲೋನಿ, ಬಷೀರ್ ಬಾಗ್, ಮಲ್ಲಿಕಾರ್ಜುನ ಲೇಔಟ್, ಸಾಯಿಪ್ರಿಯಾ ಲೇಔಟ್, ಕೇಂದ್ರೀಯ ವಿದ್ಯಾಲಯ ಸ್ಕೂಲ್, ಕೃಷ್ಣಗಿರಿ ಹಿಲ್ಸ್, ಪದ್ಮಾವತಿ ಲೇಔಟ್& ರಾಯಲ್ ಪೋರ್ಟ್ ಏರಿಯಾ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕ ಮಾಡಬುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ 1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಭಾರತೀಯ ಜನತಾ ಪಾರ್ಟಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ನೈಸರ್ಗಿಕ ಮತ್ತು ಸಾವಯವ ಕೃಷಿ ಕಾರ್ಯಗಾರ

ನೈಜ್ಯ ದೆಸೆ ನ್ಯೂಸ್



ಭಾರತೀಯ ಜನತಾ ಪಾರ್ಟಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ನೈಸರ್ಗಿಕ ಮತ್ತು ಸಾವಯವ ಕೃಷಿ ಕಾರ್ಯಗಾರ ಮಾನ್ವಿ: ಪಟ್ಟಣದ ಭಾರತೀಯ ಜನತಾ ಪಾರ್ಟಿ ಕಚೇರಿಯಲ್ಲಿ ಭಾರತೀಯ ಜನತಾ ಪಾರ್ಟಿ ಜಿಲ್ಲಾ ರೈತ ಮೋರ್ಚಾ ವತಿಯಿಂದ ನಡೆದ ನೈಸರ್ಗಿಕ ಮತ್ತು ಸಾವಯವ ಕೃಷಿ ಕಾರ್ಯಗಾರವನ್ನು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಸಾವಯವ ವಿಭಾಗದ ಮುಖ್ಯಸ್ಥರಾದ ಡಾ. ಎಂ.ಎ.ಬಸವಣ್ಣೆಪ್ಪ ಉದ್ಘಾಟಿಸಿ ಮಾತನಾಡಿ ಪ್ರಕೃತಿಯಲ್ಲಿ ಒಂದು ಇಂಚಿನಷ್ಟು ಫಲಾವತ್ತದ ಮಣ್ಣು ತಯಾರಾಗುವುದಕ್ಕೆ ಒಂದು ಸಾವಿರ ವರ್ಷ ಬೇಕಾಗುತ್ತದೆ. ಅದ್ದ–ರಿಂದ ಭೂಮಿಯನ್ನು ಹಾಳು ಮಾಡದೆ ಮುಂದಿನ ಪಿಳಿಗೆಗೆ ಫಲಾವತ್ತದ ಭೂಮಿಯನ್ನು ಉಳಿಸಿಹೋಗುವುದಕ್ಕೆ ಇಂದು ನಾವು ನೈಸರ್ಗಿಕ,ಸಾವಾಯವ ಕೃಷಿಯನ್ನು ಅಳವಾಡಿಸಿಕೊಳ್ಳಬೇಕಾಗಿದೆ ದೇಸಿ ಹಸುವನ್ನು ಸಾಕುವ ಮೂಲಕ ಬೀಜಮೃತ,ಜೀವಮೃತ, ಹೊದಿಕೆ, ಮಣ್ಣಿನ ತೇವಾಂಶವನ್ನು ಕಾಪಾಡಿಕೊಳ್ಳುವ ಮೂಲಕ ನೈಸರ್ಗಿಕ ಕೃಷಿಯನ್ನು ಕೈಗೊಳ್ಳಬಹುದಾಗಿದೆ. ಹಸಿರೆಲೆ ಗೊಬ್ಬರ,ಜೀವಣುಗೊಬ್ಬರ,ಎರೆಹುಳು ಗೋಬ್ಬರ,ಎರೆಜಲವನ್ನು ಬಳಸುವ ಮೂಲಕ ಸಾವಯವ ಕೃಷಿಯನ್ನು ಕೈಗೊಳ್ಳಬಹುದಾಗಿದೆ . ಬೆಳೆಯ ಅವಶೇಷಗಳನ್ನು ಮಣ್ಣಿಗೆ ಸೇರಿಸುವ ಮೂಲಕವು ಕೂಡ ಭೂಮಿಯ ಫಲಾವತ್ತತೆ ಹೆಚ್ಚಿಸಬಹುದು, ರಾಸಾಯನಿಕ ಮುಕ್ತ ಸಾವಯವ ಕೃಷಿಯಿಂದ ಉತ್ತಮ ಭೂಮಿಯ ಆರೋಗ್ಯ ಕಾಪಾಡಿಕೊಳ್ಳಬಹುದು. ಎಂದು ತಿಳಿಸಿದರು.ಡಾ.ತಿಮ್ಮಣ್ಣ ಮಾತನಾಡಿ ಕೇಂದ್ರ ಸರಕಾರವು ಪರಂಪರಗತ ಕೃಷಿಗೆ ಹೆಚ್ಚಿ ನ ಅದ್ಯತೆಯನ್ನು ನೀಡುತ್ತಿದು. ಪಿ.ಎಂ. ಕೀಸಾನ್ ನಿಧಿಯ 24 ನೇ ಕಂತು ಒಂದು ಕೋಟಿ ಜನರಿಗೆ ತಲುಪಿಸುವ ಕಾರ್ಯ ನಡೆಯುತ್ತಿದೆ. ರಾಷ್ಟ್ರೀಯ ನೈಸರ್ಗಿಕ ಮಿಷನ್ ಅಡಿಯಲ್ಲಿ, ಕೃಷಿ ಸಖೀ, ಲಕಪತಿ ದೀದಿ,ಡ್ರೋನ್ ದೀದಿ,ಸೇ–ರಿದಂತೆ ಅನೇಕ ಉಪಯುಕ್ತ ಯೋಜನೆಗಳ ಮೂಲಕ ರೈತರ ನೆರವಿಗೆ ಬರುತ್ತಿದೆ. ರೈತ–ರಿಗೆ ತಮ್ಮ ಸಾವಯವ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದಕ್ಕೆ ರಾಯಚೂರು ಕೃಷಿ ವಿಶ್ವವಿದ್ಯಾಲಯದಿಂದ ರೈತ ಸಂತೆಯನ್ನು ತಿಂಗಳಿಗೆ ಎರಡು ಬಾರಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.ಕೃಷಿ ವಿಜ್ಞಾನಿ ಡಾ.ಮಲ್ಲರೆಡ್ಡಿ ರೈತರಿಗೆ ನೈಸರ್ಗಿಕ ಮತ್ತು ಸಾವಯವ ಕೃಷಿಯಲ್ಲಿ ಕೀಟಮತ್ತು ರೋಗವನ್ನು ಹತೋಟಿ ಮಾಡುವುದಕ್ಕೆ ಉಪಯುಕ್ತವಾದ ಬ್ರಹ್ಮಸ್ತ್ರ,ನೀಮಾಸ್ತ್ರ,ದಶಪರಣಿ, ತಯಾ–ರಿಕೆ ಮತ್ತು ಬಳಕೆ ಕುರಿತು ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರದ ಕೃಷಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು.ಕಾರ್ಯಕ್ರಮದಲ್ಲಿ. ಭಾರತೀಯ ಜನತಾ ಪಾರ್ಟಿ ರೈತ ಮೋರ್ಚ ಜಿಲ್ಲಾಧ್ಯಕ್ಷರಾದ ತುಮು ದೊರೆ ಬಾಬು, ಮಾನ್ವಿ ಬಿಜೆಪಿ ಮಂಡಲ ಅಧ್ಯಕ್ಷರಾದ ವೀರಭದ್ರಗೌಡ ಬೋಗವತಿ ,ಮುಖಂಡರಾದ ಜೆ .ಸುಧಾಕರ್, ನಾಗಲಿಂಗ ಸ್ವಾಮಿ , ಮಲ್ಲಿಕಾರ್ಜುನ ಜಕ್ಕಲದಿನ್ನಿ , ಉದಯ ಸಾಹುಕಾರ ಚಾಗಬಾವಿ ,ಗುರುಸಿದ್ದಪ್ಪಗೌಡ ಕಣ್ಣೂರು, ಶಿವಲಿಂಗಯ್ಯ ಸ್ವಾಮಿ, ಮಲ್ಲಿಕಾರ್ಜುನ್ ಕಾಟಗಲ್, ರವಿಕುಮಾರ ಆಲ್ದಾಳ, ಭೀಮಣ್ಣ ನಾಯಕ ಹರವಿ ,ಉಮಾಪತಿ ನಾಯಕ್ ಸೇರಿದಂತೆ ರೈತರು ಇದ್ದರು.ಮಾನ್ವಿ: ಪಟ್ಟಣದಲ್ಲಿ ನಡೆದ ನೈಸರ್ಗಿಕ ಮತ್ತು ಸಾವಯವ ಕೃಷಿ ಕಾರ್ಯಗಾರದಲ್ಲಿ ಸಾವಯವ ಕೃಷಿಯಲ್ಲಿ ಕೀಟ, ರೋಗ. ಹತೋಟಿ ಮಾಡುವ ವಿವಿಧ ಉತ್ಪನ್ನಗಳ ತಯಾರಿ ತಿಳಿಸುತ್ತಿರುವ ಕೃಷಿ ವಿಜ್ಞಾನಿಗಳು.

## ಸಾಹಿತ್ಯ ಸಿಂಚನ

ಶಾಂತಿ

ಶಾಂತಿ ಎಂಬುದು ಸುಂದರ ಗಾಳಿ,
ಮನದೊಳಗೆ ಬೀಸುವ ಮಧುರ ಲಹರಿ।

ಕೋಪದ ಬೆಂಕಿ ಆರಿಸುವ ನೀರು,
ಪ್ರೀತಿಯ ಮಾತುಗಳ ಅಮೃತ ಧಾರೆ।

ಜಗಳದ ಜಾಲವ ಕತ್ತರಿಸಿ,
ಸ್ನೇಹದ ಸೇತುವೆ ಕಟ್ಟುವ ಶಕ್ತಿ।

ಶಾಂತಿ ಇದ್ದರೆ ಸುಖದ ಜೀವನ,
ನಗುವಿನಿಂದ ತುಂಬುವ ಪ್ರತಿ ಕ್ಷಣ।

ಮಾನವ ಹೃದಯದಲ್ಲಿ ಶಾಂತಿ ನೆಲೆಸಲಿ,
ಭೂಮಿಯೆಲ್ಲೆಡೆ ಪ್ರೀತಿಯ ಬೆಳಕು ಹರಡಲಿ।

– ಹನುಮೇಶ

## ರಾಜ್ಯಮಟ್ಟದ ಭಾಷಣಕಾರರ ಮತ್ತು ನಿರೂಪಕರ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ : ಎಸ್ ರಾಮಪ್ಪ

◆ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿಗನೂರು ಗ್ರಾಮದ ಸರಕಾರಿ ಶತಮಾನ ಶಾಲೆಯ ಗೌರವ ಶಿಕ್ಷಕ ನಿರೂಪಕ ಸಂಪನ್ಮೂಲ ವ್ಯಕ್ತಿ ಎಸ್ ರಾಮಪ್ಪ ಅವರು ರಾಜ್ಯಮಟ್ಟದ ಭಾಷಣಕಾರರ ಮತ್ತು ನಿರೂಪಕರ ಸಮಿತಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಎಸ್ ರಾಮಪ್ಪ ಪತ್ರಿಕಾ ಮಾಧ್ಯಮದೊಂದಿಗೆ ಮಾತನಾಡಿ ಪ್ರತಿಭೆ ನಿಮ್ಮದು ವೇದಿಕೆ ನಮ್ಮದು ಶೀರ್ಷಿಕೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರಿನ ಕರ್ನಾಟಕ ರಾಜ್ಯ ಶಿಕ್ಷಕರು ಪ್ರತಿಭಾ ಪರಿಷತ್ (ರಿ) ಭಾಷಣಕಾರರ ಮತ್ತು ನಿರೂಪಕರ ಸಮಿತಿಯ ಅನುಶ್ರೀ ತಂಡದ ಸದಸ್ಯರಾಗಿ ಆಯ್ಕೆ ಮಾಡಲಾಗಿದೆ ಎಂದು ಪ್ರತಿಭಾ ಪರಿಷತ್ತಿನ ಅಧ್ಯಕ್ಷರಾದ ಪಿ. ಮಹೇಶ್ ಆಯ್ಕೆಗೋಳಿಸಿದ್ದಾರೆ ಎಂದು ತಿಳಿಸಿದರು.ರಾಜ್ಯಮಟ್ಟದ ಭಾಷಣಕಾರರ ಮತ್ತು ನಿರೂಪಕರ ಸಮಿತಿಯ ಸದಸ್ಯನಾಗಿ ಆಯ್ಕೆಯಾಗಿರುವುದಕ್ಕೆ ಸಂತೋಷವಾಗಿದೆ ಸಮಿತಿ ಆಯೋಜಿಸುವ ಎಲ್ಲಾ ಕಾರ್ಯಕ್ರಮಗಳಲ್ಲಿ ಪ್ರಾಮಾಣಿಕವಾಗಿ ಪಾಲ್ಗೊಂಡು ಯಶಸ್ವಿಗೊಳಿಸಲು ಶ್ರಮಿಸುತ್ತೇನೆ ಹಾಗೂ ನನ್ನನ್ನು ಆಯ್ಕೆ ಮಾಡಲು ಸಹಕರಿಸಿದ ಪರಿಷತ್ತಿನ ಅಧ್ಯಕ್ಷರಾದ ಪಿ. ಮಹೇಶ, ಸಮಿತಿಯ ಮಾರ್ಗದರ್ಶಕರಾದ ಸದಾಶಿವ, ಮುಖ್ಯಸ್ಥರಾದ ಆಶಾ ಕಿರಣ್ ಎನ್, ತಂಡದ ನಾಯಕ ಜಿಎಂ ಪ್ರದೀಪ್ ಕುಮಾರ್ ಅವರಿಗೆ ಅಭಿನಂದನೆಗಳು ಸಲ್ಲಿಸುತ್ತೇನೆ ಎಂದರು.

## ಖಾದ್ಯ ತೈಲ ಸಂರಕ್ಷಣೆ ಕುರಿತು ಜಾಗೃತಿ ಅಭಿಯಾನ ಕಾರ್ಯಕ್ರಮ ಜರಿಗಿತ್ತು

◆ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿನೂರು ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಖಾದ್ಯ ತೈಲ ಸಂರಕ್ಷಣೆ ಕುರಿತು ಜಾಗೃತಿ ಅಭಿಯಾನ ಕಾರ್ಯಕ್ರಮವನ್ನುಬ್ಲಾಕ್ ಭಾನುವಾರ ಹಮ್ಮಿಕೊಳ್ಳಲಾಗಿತ್ತು, ಈ ವೇಳೆ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ಬಿ. ಮಂಜುಳಾ ಮಾತನಾಡಿ ಖಾದ್ಯ ತೈಲ ಸಂರಕ್ಷಣೆ ಆಹಾರ ಭದ್ರತೆ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ, ಖಾದ್ಯ ತೈಲ ಸಸ್ಯಗಳು ಮತ್ತು ಬೀಜಗಳಿಂದ ದೊರೆಯುತ್ತದೆ ಅಡುಗೆಯ ರುಚಿ, ಪರಿಮಳ ಮತ್ತು ಆರೋಗ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಕೆಬಿ ವೀರೇಶ್, ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಂರಕ್ಷಣಾಧಿಕಾರಿ ಪೂಜಾ, ಬಿಜೆಪಿ ಹಿರಿಯ ಮುಖಂಡರಾದ ಮಹೇಶ ಗೌಡ, ಎಮ್ಮಿಗನೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಟಿ.ರಾಮಪ್ಪ,ಕಂಪ್ಲಿ ಮಂಡಲ ಯುವ ಮೋರ್ಚಾ ಅಧ್ಯಕ್ಷ ಬಡಿಗೇರ್ ವೀರೇಶ, ಎಸ್ ಸಿ ಮೋರ್ಚದ ಪ್ರಧಾನ ಕಾರ್ಯದರ್ಶಿ ಎಚ್. ಪಂಪಾಪತಿ, ಪದಾಧಿಕಾರಿಗಳಾದ ಮಡಿವಾಳರ ವೀರೇಶ, ರಂಗಪ್ಪ, ಸತ್ಯ, ಮಾರುತಿ, ಮಲ್ಲೇಶ ಹಾಗೂ ವಿದ್ಯಾರ್ಥಿಗಳು ಸಿಬ್ಬಂದಿ ವರ್ಗ, ಮಹಿಳೆಯರು ಸೇರಿದಂತೆ ಇತರರು ಹಾಜರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಯೋಗವು ಭಾರತದ ಪ್ರಾಚೀನ ಕೊಡುಗೆ, ಇಂದು ವಿಶ್ವವೇ ಒಪ್ಪಿಕೊಂಡಿದೆ ಪ್ರತಾಪಗೌಡ ಪಾಟೀಲ್

◆ ನೈಜ್ಯ ದೆಸೆ ನ್ಯೂಸ್

ಮಸ್ಕಿ: ಪಟ್ಟಣದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಯೋಗಭ್ಯಾಸವನ್ನು ಆಯೋಜನೆ ಮಾಡಲಾಯಿತು.ಯೋಗವು ಪ್ರಾಚೀನ ಕೊಡುಗೆಯಾಗಿದ್ದು,ದೇಹ,ಮನಸ್ಸು ಮತ್ತು ಆತ್ಮದ ನಡುವಿನ ಸಮತೋಲನವನ್ನು ಕಾಯ್ದುಕೊಳ್ಳಲು ಸಹಾಯ ಮಾಡುತ್ತದೆ. ಪ್ರಧಾನಿ ನರೇಂದ್ರ ಮೊದಿಜಿ ಪ್ರಸ್ತಾಪದ ಮೇರೆಗೆ ವಿಶ್ವ ಸಂಸ್ಥೆಯು 21 ಜೂನ್ 2014 ರಂದು ಅಧಿಕೃತವಾಗಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಎಂದು ಘೋಷಿಸಿತು,ಮುಖ್ಯವಾಗಿ ಯೋಗವು ದೈಹಿಕ ಸಾಮರ್ಥ್ಯ ಹೆಚ್ಚಳ, ಒತ್ತಡ ಮತ್ತು ಆತಂಕವನ್ನು ಕಡಿಮೆ



ಮಾಡಿ, ಮಾನಸಿಕ ನೆಮ್ಮದಿ ನೀಡುತ್ತದೆ, ಉಸಿರಾಟ ನಿಯಂತ್ರಣ,ರೋಗನಿರೋಧಕ ಶಕ್ತಿ ಹೆಚ್ಚಿಸಿ,ದೈನಂದಿನ ಜೀವನದಲ್ಲಿ ಶಿಸ್ತು ಮತ್ತು ಏಕಾಗ್ರತೆ ವೃದ್ಧಿ. ಹೀಗೆ ಯೋಗದಿಂದ ಇಷ್ಟೆಲ್ಲಾ ಪ್ರಯೋಜನಗಳು ಇವೆ. ನಂತರ ಮಾಜಿ ಶಾಸಕರಾದ ಶ್ರೀ ಪ್ರತಾಪ್ ಗೌಡ ಪಾಟೀಲ್ ಯೋಗ ಅಭ್ಯಾಸದ ಕುರಿತು ಮಾತನಾಡಿದರು. ಈ ವೇಳೆಯಲ್ಲಿ ಪತಾಂಜಲಿ ಯೋಗ ಸಮಿತಿ ಅಧ್ಯಕ್ಷರಾದ ಸುಕಮುನಿಪ್ಪ ನಾಯಕ, ಮಹಿಳಾ ಪತಾಂಜಲಿ ಯೋಗ ಸಮಿತಿ ಅಧ್ಯಕ್ಷೆ ಚಂದ್ರಕಲಾ ದೇಶಮುಖ, ಆನಂದ್ ಪತ್ತಾರ್,ಪುರಸಭೆ ಅಧ್ಯಕ್ಷ ಸುರೇಶ್ ಅರಸುರ, ಡಾಕ್ಟರ್ ಬಿ ಎಚ್ ದಿವಟರ , ಡಾಕ್ಟರ್ ಮಲ್ಲಿಕಾರ್ಜುನ್ ಇತ್ಲಿ, ಮಲ್ಲೇಶಪ್ಪ ಬ್ಯಾಳಿ, ಶರಣಬಸವ ಸೊಪ್ಪಿಮಠ, ವೀರೇಶ್ ಹಿರೇಮಠ, ಶಿವರಾಜ್ ಎಂಬಲದ, ಅಮರೇಶ್ ಬ್ಯಾಳಿ, ಮೌನೇಶ ನಾಯಕ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು.

## ಕಾರುಣ್ಯಾಶ್ರಮದ ಸೇವೆಯು ರಾಯಚೂರು ಜಿಲ್ಲೆಗೆ ಗೌರವ ತಂದಿದೆ – ಅಮರನಾಥ ಹಳ್ಳೂರು

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು – ಸಮಾಜದಿಂದ ತಿರಸ್ಕೃತಗೊಂಡವರಿಗೆ ಸುಂದರ ಬದುಕು ಕಟ್ಟಿಕೊಟ್ಟ ಕಾರುಣ್ಯಾಶ್ರಮ ಕರುಣೆಯ ಕುಟುಂಬವಾಗಿದೆ ಕಾರುಣ್ಯಾಶ್ರಮದ ಸೇವೆಯು ರಾಯಚೂರು ಜಿಲ್ಲೆಗೆ ಗೌರವ ತಂದಿದೆ ಮಾನವ ಧರ್ಮದ ಮನುಷ್ಯತ್ವಕ್ಕೆ ಸಂಪೂರ್ಣ ಅರ್ಥ ಕಲಿಸಿ ಕೊಟ್ಟಿರುವ ಕಾರುಣ್ಯ ಆಶ್ರಮದ ಪ್ರಾಮಾಣಿಕ ಸೇವೆಗೆ ನಾವು ಸದಾವಕಾಲವಿರುತ್ತೇವೆ ನಿಸ್ವಾರ್ಥದ ಹಾದಿಯಲ್ಲಿ ಸಾಗುತ್ತಿರುವ ಈ ಕಾರುಣ್ಯ ಸಂಸ್ಥೆ ನಮ್ಮ ನಾಡಿನ ಕರುಣೆಯ ಕಾರುಣ್ಯ ಕುಟುಂಬವಾಗಿರುವುದು ನಮ್ಮೆಲ್ಲರಿಗೆ ಹೆಮ್ಮೆಯಾಗಿದೆ ಎಂದು ಬಳಗಾನೂರಿನ ಶ್ರೀ ಬಸವೇಶ್ವರ ಪ್ರೌಢಶಾಲೆಯ ಮುಖ್ಯ ಗುರುಗಳಾದ ಅಮರನಾಥ ಹಳ್ಳೂರು ಮಾತನಾಡಿದರು. ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)




ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮಕ್ಕೆ ಬಂಧುಗಳೊಂದಿಗೆ ಭೇಟಿ ನೀಡಿ ಆಶ್ರಯದಾತುರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಆತ್ಮಸ್ಥೈರ್ಯ ತುಂಬಿದರು. ನಂತರ ಬಸವರಾಜ ಮಾತನಾಡಿ ನಮ್ಮ ತಂದೆಯವರು ಕಾರುಣ್ಯ ಆಶ್ರಮದಲ್ಲಿ ಹಲವಾರು ಸೇವಾ ಕಾರ್ಯಗಳನ್ನು ಮಾಡುತ್ತಿರುವುದು ನಮಗೆ ಬಹಳ ಸಂತೋಷವನ್ನುಂಟು ಮಾಡಿದೆ. ಕಾರುಣ್ಯಾಶ್ರಮದ ಸೇವೆಗೆ ಎಲ್ಲರೂ ಕೈಜೋಡಿಸಬೇಕು. ಸರ್ಕಾರದ ಯಾವುದೇ ಸೌಲಭ್ಯಗಳಿಲ್ಲದೆ ಸ್ವಂತ ಜಾಗವಿಲ್ಲದೆ ಹಲವಾರು ಅಂದ ಅನಾಥರಿಗೆ ಮತ್ತು ವಯಸ್ಕರ ಬುದ್ಧಿಮಾಂದ್ಯರಿಗೆ ಬರೀ ಊಟ ವಸತಿ ಆರೋಗ್ಯವಲ್ಲದೆ ಅವರ ಹಿಂದಿನ ನೋವುಗಳನ್ನು ಮರೆಸಿ ಸಂಬಂಧಿಗಳ ಹಾಗೆ ಅವರುಗಳನ್ನು ನೋಡಿಕೊಳ್ಳುತ್ತಿರುವುದು. ಮಾನವೀಯತೆಗೆ ಸಂಪೂರ್ಣ ಅರ್ಥ ಕಲ್ಪಿಸಿಕೊಟ್ಟಿದೆ. ಮುಂದಿನ ದಿನಮಾನಗಳಲ್ಲಿ ನಿರಂತರವಾಗಿ ನಮ್ಮ ಕುಟುಂಬ ನಮ್ಮ ಎಲ್ಲಾ ಸಂಬಂಧಿಗಳು ಕಾರುಣ್ಯ ಆಶ್ರಮದ ಸೇವೆಯ ಜೊತೆ ಸದಾವ ಕಾಲು ಇರುತ್ತೇವೆ ಎಂದು ಭಾವನಾತ್ಮಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಮಲ್ಲಯ್ಯ ಸ್ವಾಮಿ ಸಿರವಾರ ಮಠ ಮಸ್ಕಿ. ವೆಂಕಟೇಶ. ಅಮರನಾಥ ಹಳ್ಳೂರು ದೇವಮ್ಮ ಗಂ. ವೆಂಕಟೇಶ ಇವರುಗಳನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬಸವರಾಜ ತಂ ವೆಂಕಟೇಶ. ಮಂಜುನಾಥ ತಂ.ಗುಂಡಪ್ಪ. ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ . ಸದಸ್ಯರಾದ ಸುಜಾತ ಹಿರೇಮಠ. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.ಜ್ಯೋತಿ.ಅನೇಕರು ಉಪಸ್ಥಿತರಿದ್ದರು.

# ಯೋಗ ಮಾಡಿ ನಿರೋಗಿಯಾಗಿ – ಎಚ್.ಬಿ.ಎಂ.

◆ ನೈಜ್ಯ ದೆಸೆ ನ್ಯೂಸ್

"ಯೋಗವು ಕೇವಲ ವ್ಯಾಯಾಮವಲ್ಲ; ಅದು ಉತ್ತಮ ಆರೋಗ್ಯ, ಶಾಂತ ಮನಸ್ಸು ಮತ್ತು ಉತ್ತಮ ವ್ಯಕ್ತಿತ್ವವನ್ನು ರೂಪಿಸುವ ಜೀವನ ಪದ್ಧತಿಯಾಗಿದೆ. ವಿದ್ಯಾರ್ಥಿಗಳು ಪ್ರತಿದಿನ ಕನಿಷ್ಠ 20 ರಿಂದ 30 ನಿಮಿಷ ಯೋಗಾಭ್ಯಾಸ ಮಾಡಿದರೆ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿ ಜೀವನದಲ್ಲಿ ಯಶಸ್ಸು ಸಾಧಿಸಬಹುದು. "ಆರೋಗ್ಯವೇ ಭಾಗ್ಯ" ಎಂಬ ಮಾತಿನಂತೆ, ಯೋಗವು ಆರೋಗ್ಯಕರ ಮತ್ತು ಸಂತೋಷದ ಬದುಕಿಗೆ ದಾರಿ ತೋರಿಸುತ್ತದೆ" ಉದ್ಘಾಟಿಸಿದ ಮಾಜಿ ಪುರಸಭೆ ಸದಸ್ಯ ಎಚ್.ಬಿ.ಎಂ. ಭಾಷ ಹೇಳಿದರು. ಮೇರಾ ಯುವ ಭಾರತ ಕೇಂದ್ರ ರಾಯಚೂರು, ಭಾರತ ಸೇವಾದಳ, ರೆಡ್ ಕ್ರಾಸ್, ವಂದೇ ಮಾತರಂ ಯುವ ಸಂಘ ಮದ್ಲಾಪುರ, ಬಡವರ ಬಂಧು ಯುವಕ ಸಂಘ ಮಾನ್ವಿ ಸಂಯುಕ್ತ ಆಶ್ರಯದಲ್ಲಿ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಸರ್ಕಾರಿ ಪ್ರೌಢ ಶಾಲೆ ಕೋನಾಪೂರ ಪೇಟ್ ಶಾಲೆ ಅವರಣದಲ್ಲಿ ಆಚರಿಸಿ ಪ್ರಶಸ್ತಿಪತ್ರ ವಿತರಸಲಾಯಿತು.ಮುಖ್ಯ ಅತಿಥಿಯಾಗಿ ಮಾತನಾಡಿದ ಸಂಪನ್ಮೂಲ ವ್ಯಕ್ತಿ ಮಹಿಬೂಬ್ ಮದ್ಲಾಪುರ "ಇವತ್ತಿನ ಬದುಕು ಒತ್ತಡಮಯ ಮತ್ತು ರೋಗಗಳೊಂದಿಗೆ ಬದುಕುವ ಜೀವನ ಅತ್ಯುತ್ತಮ ಜೀವನ ಶೈಲಿ ಅರ್ಥಪೂರ್ಣ ಮಾದರಿಯ ಇರಲು ಬಯಸಿದರೆ ಯೋಗ ರೂಡಿಸಿಕೊಳ್ಳಿ. ಮಕ್ಕಳಿಗೆ ಏಕಾಗ್ರತೆ ವೃದ್ಧಿಸಿಕೊಳ್ಳಲು ಯೋಗಾಭ್ಯಾಸ ಅಗತ್ಯ ಮೊಬೈಲ್ ಮತ್ತು ಟಿವಿ ರಿಮೋಟ್ ಗಳಿಂದ ಮುಕ್ತತೆ ಪಡೆದು ಸಾಧನೆಯ ಹಾದಿಯತ್ತಾ ಸಾಗಲು ನಾವು ದಿನನಿತ್ಯ ದ್ಯಾನ ಮಾಡುವುದು ಉತ್ತಮ" ಎಂದು ಹೇಳಿದರು. ಅಧ್ಯಕ್ಷತೆಯಲ್ಲಿ ಮುಖ್ಯಗುರು ವಿರುಪಾಕ್ಷಪ್ಪ ಮಾತನಾಡುತ್ತಾ "ನಮ್ಮ ದೇಶದ ಅತ್ಯುನ್ನತ ಸಾಧನೆಗಳಲ್ಲಿ ಒಂದು ಪ್ರಪಂಚಕ್ಕೆ ನನ್ನ ದೇಶ ಯೋಗ ಪರಿಚಯಿಸಿದೆ ನಾವು ನೀವುಗಳು ಜಿಮ್ ಮತ್ತು ಇನ್ನಿತರೆಗಳಲ್ಲಿ




ಭಾಗಿಯಾಗುವುದಕ್ಕಿಂತ ವ್ಯಾಯಮ ದ್ಯಾನ ಯೋಗ ಮಾಡೋಣ ದೇಹದಲ್ಲಿನ ಮನಸ್ಸು ಆತ್ಮ ಶುದ್ದವಾಗಿಟ್ಟುಕೊಳ್ಳೋಣ.ಸಂಧರ್ಭದ 'ಲ್ಲಿ ವೇದಿಕೆಯಲ್ಲಿ ಯೋಗಗುರು ಮೌನೇಶ ಪೋತ್ನಾಳ್, ಶಿಕ್ಷಕ ಸಂಜೀವಪ್ಪ ಚಲವಾದಿ, ವಿಜಯ, ಮಹೆಬೂಬ್ ಯಾದಗಿರಿ, ರಘುನಂದನ್, ರಾಮಸ್ವಾಮಿ, ಬಡವರ ಬಂಧು ಸಂಘದ ಅಧ್ಯಕ್ಷ ದೇವಣ್ಣ ಭಜಂತ್ರಿ, ಗ್ರಂಥಪಾಲಕ ರಮೇಶ ಪೂಜಾರಿ, ಪ್ರಗತಿಪರ ರೈತ ರೆಡ್ಡಿ ಮತ್ತು ಶಿಬಿರಾರ್ಥಿಗಳಿದ್ದರು.

# ವರದಕ್ಷಿಣೆ ಮುಕ್ತ ಬಂಜಾರ ಸಮುದಾಯ ನಿರ್ಮಿಸಲು ಶ್ರಮಿಸೋಣ – ವೆಂಕಟೇಶ್ ಎನ್ ರಾಠೋಡ್



◆ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು – ವರದಕ್ಷಿಣೆ ಮುಕ್ತ ಬಂಜಾರ ಸಮಾಜ ನಿರ್ಮಿಸಲು ಸಮಾಜದ ಎಲ್ಲ ನಾಯಕ, ಕಾರಬಾರಿ, ಡಾವ, ಶಾಣ, ಹಸಾಬಿ , ನಸಾಬಿ , ಯ ಎಲ್ಲ ಸಮಾಜದ ಹಿರಿಯರು ಒಗ್ಗೂಡಿ ಶ್ರಮಿಸೋಣ ಎಂದು ಆಲ್ ಇಂಡಿಯಾ ಬಂಜಾರ ಸಂಘದ ತಾಲೂಕ ಅಧ್ಯಕ್ಷ ವೆಂಕಟೇಶ್ ಎನ್ ರಾಠೋಡ್ ಹೇಳಿದರು ಅವರಿಂದು ಆಲ್ ಇಂಡಿಯಾ ಬಂಜಾರ ಸೇವಾ ಸಂಘ ( ರಿ ) ರಾಷ್ಟ್ರೀಯ ಗೋರ್ ಸೇನಾ ತಾಲೂಕ ಘಟಕ, ಸರಕಾರಿ ಅರೇ ಸರಕಾರಿ ನೌಕರರ ಸಂಘ ಇವರುಗಳ ಸಹಯೋಗದಲ್ಲಿ ಬಂಜಾರ ಸಮಾಜದಲ್ಲಿನ ವರದಕ್ಷಿಣೆ ಪಿಡುಗು ನಿರ್ಮೂಲನೆ ಹಾಗೂ ಜಾಗೃತಿ ಸಭೆಯನ್ನು ಕಳಾಪುರ ರಸ್ತೆಯ ಬಂಜಾರ ಸಂಸ್ಕೃತ ಕೇಂದ್ರ ( ಭವನ ) ದಲ್ಲಿ ಜ್ಯೋತಿ ಬೆಳಗಿಸುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು ನಮ್ಮ ಬಂಜಾರ ಸಮಾಜದಲ್ಲಿ ಇತ್ತೀಚಿನ ದಿನಗಳಲ್ಲಿ ವರದಕ್ಷಿಣೆ ಎಂಬ ಪಿಡುಗು ಹೆಚ್ಚಾಗಿದ್ದು ಇದರಿಂದ ಅನೇಕ ಬಡ ಕುಟುಂಬಗಳು ಆರ್ಥಿಕ ಹಾಗೂ ಮಾನಸಿಕ ತೊಂದರೆ ಅನುಭವಿಸುತ್ತಿದೆ ಮುಂದಿನ ಪೀಳಿಗೆಯ ಭವಿಸ್ಯಕ್ಕಾಗಿ ಈ ಕೆಟ್ಟ ಪದ್ದತಿಯನ್ನು ನಿರ್ಮೂಲನೆ ಮಾಡಬೇಕಿದೆ. ಸರಕಾರ ಮಾಡಬೇಕಿರುವ ಕೆಲಸ ಇವರು ಮಾಡುತ್ತಿದ್ದಾರೆ. ಬಾಗಲಕೋಟೆ , ಗುಲ್ಬರ್ಗ , ಬಿಜಾಪುರ್ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಈ ವರದಕ್ಷಿಣೆ ಪಿಡುಗು ನಿಷೇದ ಮಾಡಿದ್ದಾರೆ . ರಾಯಚೂರು ಜಿಲ್ಲೆಯಲ್ಲಿ ನಮ್ಮ ಲಿಂಗಸಗೂರು ತಾಲೂಕಿ ನ್ನಿಂದಲೇ ಪ್ರಾರಂಭಿಸಿದ್ದೇವೆ ವರದಕ್ಷಿಣೆ ಪಿಡುಗು ನಿಷೇದ ಮಾಡಲು ನಾವೆಲ್ಲರೂ ಪಣತೋಟ್ಟಿದ್ದೇವೆ. ನಮ್ಮ ಸಮುದಾಯ ಹೆಚ್ಚು ಬಡ ಸಮುದಾಯವಾಗಿದೆ . ಸಮುದಾಯದಲ್ಲಿ ಬಂಜಾರ ಸಮುದಾಯ ದೊಡ್ಡದು ನಾವುಗಳು ದೊಡ್ಡವರಲ್ಲ, ಸಮಾಜಕ್ಕಾಗಿ ನಾವು ಸಂಘ ಕಟ್ಟಬೇಕೆ ಹೊರತು ಅದು ನಮ್ಮ ಸ್ವಂತಕ್ಕಾಗಿ ಅಲ್ಲ ಇದರಿಂದ ಬಡವ ಬಡವನಾಗಿಯೇ ಉಳಿಯುತ್ತಾನೆಯೇ ಹೊರತು ಆತನು ಶ್ರೀಮಂತನಾಗುವುದಿಲ್ಲ ಆದ್ದರಿಂದ ಸಮಾಜದಲ್ಲಿ ಎರಡೆರಡು ಸಂಘಟನೆ ಮಾಡಬಾರದು ಸಂಘಟನೆ ಯಲ್ಲಿ ಒಗ್ಗಟ್ಟು ಇರಬೇಕು ಈ ಸಂಘಟನೆಯಲ್ಲಿ ಹೆಚ್ಚೇಚ್ಚು ಯುವಕರು ಕೈಜೋಡಿಸಬೇಕೆಂದರು . ಈ ಸಂದರ್ಭದಲ್ಲಿ ಅಮರೇಶ್ ರಾಠೋಡ್ ಅಧ್ಯಕ್ಷರು ಆಲ್ ಇಂಡಿಯಾ ಬಂಜಾರ ಸೇವಾ ಸಂಘ , ಗೋವಿಂದ ರಾಜ್ ವಕೀಲರು ರಾಜ್ಯ ಉಪಾಧ್ಯಕ್ಷರು ಆಲ್ ಇಂಡಿಯಾ ಬಂಜಾರ ಸೇವಾ ಸಂಘ , ದೇವಪ್ಪ ರಾಠೋಡ್ ರಾಜ್ಯ ಜಂಟಿ ಕಾರ್ಯದರ್ಶಿ , ಲಾಲಪ್ಪ ರಾಠೋಡ್ ಜಿಲ್ಲಾ ಉಪಾಧ್ಯಕ್ಷರು , ಶಿವಣ್ಣ ಪವಾರ್ ಜಿಲ್ಲಾ ಕಾರ್ಯದರ್ಶಿ , ಲಕ್ಷ್ಮಣ್ ರಾಠೋಡ್ ತಾಲೂಕ ಗೌರವಧ್ಯಕ್ಷರು , ನೀಲೇಶ್ ಪವಾರ್ ತಾಲೂಕ ಪ್ರದಾನ ಕಾರ್ಯದರ್ಶಿ , ಶಂಕರ್ ಪವಾರ್ ಜಿಲ್ಲಾ ಸಂಚಾಲಕರು , ಲಕ್ಷ್ಮಿಭಾಯಿ ಮಹಿಳಾ ತಾಲೂಕ ಘಟಕದ ಅಧ್ಯಕ್ಷರು , ದೇವೇಂದ್ರ ನಾಯ್ಕ್ ವಕೀಲರು , ಕೃಷ್ಣ ಜಾದವ್ ಮಸ್ಕಿ , ಲಕ್ಷ್ಮಣ್ ನಾಯ್ಕ್ , ಪದ್ಮರಾಜ್ ನಾಯ್ಕ್ , ಮುಕೇಶ್ ಚವಾಣ್ , ಚಂದ್ರು ಬನತ್ , ಚಲುವಪ್ಪ ಚವಾಣ್ , ಭೀಮಪ್ಪ ನಾಯ್ಕ್ , ತಿಪ್ಪಣ್ಣ ನಾಯ್ಕ್ ಸೇರಿದಂತೆ ಒಟ್ಟು 37 ತಾಂಡದ ಸಮಾಜದ ಗುರು ಹಿರಿಯರು, ಮಹಿಳೆಯರು ಸಮಾಜದ ಬಾಂದವರು ಇದ್ದರು .



## ನೇಮಕಾತಿ ಪ್ರಕಟಣೆ


### KPCL ನೇಮಕಾತಿ 2026 – 2 ಸಹಾಯಕ ಕಾನೂನು ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ

ಜೂನ್ 12, 2026 ಶಶಿ ಅವರಿಂದ ಏಕಅಐ ನೇಮಕಾತಿ 2026: 2 ಸಹಾಯಕ ಕಾನೂನು ಅಧಿಕಾರಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ ಜೂನ್ 2026 ರ ಏಕಅಐ ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಕಾನೂನು ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22–ಜೂನ್–2026 ರಂದು ಅಥವಾ ಮೊದಲು ಇಮೇಲ್ ಕಳುಹಿಸಬಹುದು. ಅಧಿಕೃತ ವೆಬ್‌ಸೈಟ್: karnatakapower.com

## ಅಂಧ ಶೇಖರಪ್ಪನಿಗೆ ಆಸರೆಯಾದ ಕಾರುಣ್ಯ ಆಶ್ರಮ

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು – ತಾಲೂಕಿನ ಮುಳ್ಳೂರು ಗ್ರಾಮದ ಎರಡು ಕಣ್ಣಿಲ್ಲದ ಶೇಖರಪ್ಪ ವಯಸ್ಸು–81 ಈತನಿಗೆ ಮಕ್ಕಳಿಲ್ಲದಿರುವುದು ಹಾಗೂ ಕೆಲವೇ ತಿಂಗಳುಗಳ ಹಿಂದೆಯಷ್ಟೇ ಧರ್ಮಪತ್ನಿಯೂ ಕೂಡ ಸ್ವರ್ಗಸ್ತರಾಗಿದ್ದಾರೆ. ಗ್ರಾಮದಲ್ಲಿ ಅಲ್ಲಲ್ಲಿ ಜನರ ಸಹಾಯ ಸಹಕಾರದೊಂದಿಗೆ ಬದುಕುತ್ತಿದ್ದ ಈತನಿಗೆ ಮುಳ್ಳೂರು ಗ್ರಾಮಸ್ಥರು ಸಿಂಧನೂರಿನ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಯ ಕಲ್ಪಿಸಿ ಕೊಟ್ಟಿದ್ದಾರೆ. ಈ ಸಮಯದಲ್ಲಿ ಕಾರುಣ್ಯ ಆಶ್ರಮದ ಟ್ರಸ್ಟಿಗಳಾದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಮಾತನಾಡಿ ಇಂತಹವರ ಸೇವೆ ಮಾಡುವುದು ನಮ್ಮ ಕಾರುಣ್ಯ ಸಂಸ್ಥೆಯ ಮೂಲ ಉದ್ದೇಶ ಗದಗಿನ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಗವಾಯಿಗಳ ಆದರ್ಶದ ಆಶಯದಂತೆ ನಾವು ಈ ಸೇವಾ ಕಾರ್ಯವನ್ನು ಮಾಡುತ್ತಿದ್ದೇವೆ.



ಸಮಾಜದಿಂದ ತಿರಸ್ಕೃತಗೊಂಡವರು ನೆಲೆ ಇಲ್ಲದವರು ನಮ್ಮ ತಂದೆ ತಾಯಿಗಳ ಸ್ವರೂಪಿಗಳು ಅವರುಗಳಿಗೆ ನಾವು ಮಕ್ಕಳಾಗಿ ಮೊಮ್ಮಕ್ಕಳಾಗಿ ಪ್ರೀತಿ ಕೊಡುವ ಕಾರ್ಯವೇ ನಮ್ಮ ಕಾರುಣ್ಯ ಕುಟುಂಬದ ಮೂಲ ಸಂಕಲ್ಪವಾಗಿದೆ. ಮುಳ್ಳೂರು ಗ್ರಾಮದ ಎರಡು ಕಣ್ಣಿಲ್ಲದ ಶೇಖರಪ್ಪ ನಮ್ಮ ಕಾರುಣ್ಯ ಕುಟುಂಬದಲ್ಲಿ ಕೂಸಾಗಿ ನಮ್ಮೊಂದಿಗೆ ಉತ್ತಮ ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿಯಿಂದ ಬಾಳಲಿ ಎನ್ನುವುದು ನಮ್ಮ ಪ್ರಾರ್ಥನೆಯಾಗಿದೆ ಎಂದು ಮಾತನಾಡಿದರು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಕಾರುಣ್ಯ ಕುಟುಂಬದ ಅನಾಥರ ಬಾಳಿಗೆ ದಾನಿಗಳೇ ಬೆಳಕಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಆಶ್ರಮದಲ್ಲಿ ಆಶ್ರಯದಾತರುಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಕಷ್ಟದಲ್ಲಿ ಸಾಗುತ್ತಿದೆ. ಆದ್ದರಿಂದ ದಯಾಳುಗಳಾದ ಕರುಣಾಮಯಿಗಳು ತಮ್ಮ ಕೈಯಿಂದಾದಂತಹ ಸಹಾಯ ಮಾಡಿರಿ ಎನ್ನುವ ವಿನಂತಿಯನ್ನು ನಾಗರಿಕರಲ್ಲಿ ಮಾಡಿಕೊಳ್ಳುತ್ತಿದ್ದೇವೆ ಎಂದು ಮಾತನಾಡಿದರು. ಈ ಸಮಯದಲ್ಲಿ ರುದ್ರಪ್ಪ ಪತ್ತಾರ. ಬಾಲಾಜಿ ತಂ. ಹನುಮಂತಪ್ಪ ಮುಳ್ಳೂರು. ಡಾ.ವೆಂಕಟೇಶ್ ಸ್ವಾಮಿ ಪಗಡೆದಿನ್ನಿ. ಹುಲ್ಲೇಶ ತಂ. ಬಾಲಪ್ಪ ಮುಳ್ಳೂರು. ನಾಗಪ್ಪ ತಂ.ಛತ್ರಪ್ಪ ಮುಳ್ಳೂರು ಕ್ರಾಸ್. ಹಾಗೂ ಆಶ್ರಮದ ಸಲಹಾ ಸಮಿತಿಯ ಸದಸ್ಯರುಗಳಾದ ಶರಣಪ್ಪ ಕಸಬಾ ಲಿಂಗಸೂಗೂರು. ಮಹೇಶ ಕಸಬಾ ಲಿಂಗಸೂಗೂರು. ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಅನೇಕರು ಉಪಸ್ಥಿತರಿದ್ದರು.

## ಮಸ್ಕಿ:ಪೌರಕಾರ್ಮಿಕರಿಂದ ಅಂತರಾಷ್ಟ್ರೀಯ ಯೋಗದಿನ ಆಚರಣೆ

◆ ನೈಜ್ಯ ದೆಸೆ ನ್ಯೂಸ್



ಮಸ್ಕಿ : ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಇಲ್ಲಿನ ಪುರಸಭೆ ಕಚೇರಿಯ ಆವರಣದಲ್ಲಿ ಅಧಿಕಾರಿಗಳು ಹಾಗೂ ಪೌರಕಾರ್ಮಿಕರು ಯೋಗ ಮಾಡುವ ಮೂಲಕ ಭಾನುವಾರ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಿದರು ಈ ಸಂದರ್ಭದಲ್ಲಿ ಪುರಸಭೆ ಮುಖ್ಯ ಅಧಿಕಾರಿ ನರಸರೆಡ್ಡಿ ಮಾತನಾಡಿ ಇಂದಿನ ದಿನಮಾನಗಳಲ್ಲಿ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತಿ ಮುಖ್ಯವಾಗಿದೆ ಅದರಲ್ಲೂ ಪಟ್ಟಣದ ಸ್ವಚ್ಛಂದವನ್ನು ಕಾಪಾಡುವ ನಮ್ಮ ಪೌರಕಾರ್ಮಿಕರು ಆರೋಗ್ಯ ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯ ಮನುಷ್ಯ ಸದೃಢವಾಗಿದ್ದರೆ ಮಾತ್ರ ಎಲ್ಲಾ ಕೆಲಸಗಳನ್ನು ಮಾಡಬಲ್ಲ ಆದ್ದರಿಂದ ಪ್ರತಿದಿನವೂ ಸ್ವಲ್ಪ ಸಮಯವನ್ನು ಬಿಡುವು ಮಾಡಿಕೊಂಡು ಯೋಗ ಆರೋಗ್ಯವನ್ನು ಉತ್ತಮವಾಗಿ ಇಟ್ಟುಕೊಳ್ಳಿ ಎಂದು ಸಲಹೆ ನೀಡಿದರು ಈ ಸಂದರ್ಭದಲ್ಲಿ ಸಿಬ್ಬಂದಿಗಳು ಹಾಗೂ ಪೌರಕಾರ್ಮಿಕರು ಇದ್ದರು

## ಕುಡಿಯುವ ನೀರಿನ ಸಮಸ್ಯೆಗಳ ಮಾಹಿತಿ ನೀಡಿ : ಜಿಲ್ಲಾಧಿಕಾರಿ ಪೂವಿತಾ ಎಸ್.

◆ ನೈಜ್ಯ ದೆಸೆ ನ್ಯೂಸ್



ರಾಯಚೂರು ಜೂನ್ 20 (ಕರ್ನಾಟಕ ವಾರ್ತೆ): ಜಿಲ್ಲೆಯಲ್ಲಿ ಪ್ರಸ್ತುತ ಮಳೆ ಕಡಿಮೆಯಾಗಿರುವುದರಿಂದ ಮುಂದಿನ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆಗಳಾಗಬಹುದು ಎಂಬುದರ ಕು–ರಿತು ಸಂಬಂಧಿಸಿದ ಇಲಾಖೆಯ ಅಧಿಕಾ–ರಿಗಳು ಕೂಡಲೇ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜೂನ್ 20ರ ಶನಿವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ–ರಿಯ ಸಭಾಂಗಣದಲ್ಲಿ ಕುಡಿಯುವ ನೀರಿನ ಸಮಸ್ಯೆ, ರಸಗೊಬ್ಬರ, ಮಳೆಹಾನಿ ಮುಂತಾದ ವಿಷಯಗಳ ಕುರಿತು ಚರ್ಚಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕರೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯ ಆಯಾ ತಾಲ್ಲೂಕಿನ ಕೆರೆಗಳಲ್ಲಿ ಎಷ್ಟು ನೀರು ಇವೆ. ಮತ್ತು ಎಷ್ಟು ದಿನಕ್ಕೆ ಆಗುವಷ್ಟು ಇವೆ. ಎನ್ನುವ ಕುರಿತು ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳು ಕೂಡಲೇ ನೀಡಬೇಕು. ಎಲ್ಲಾ ಕಾಲುವೆಗಳನ್ನು ಸರಿಯಾಗಿ ಸ್ವಚ್ಚತೆ ಮಾಡಬೇಕು. ಈ ಸಲ ಜುಲೈನಲ್ಲಿ ಡ್ಯಾಂ ನಿಂದ ನೀರು ಬಿಟ್ಟಾಗ ಮೈಲ್ ನಿಂದ ಮೈಲಿಗೆ ತಂಡಗಳನ್ನು ಮಾಡಿ ನೀರನ್ನು ಸರಿಯಾದ ರೀತಿಯಲ್ಲಿ ತಲುಪಿಸುವ ನೀರಾವರಿ ಇಲಾಖೆಯ ಪಾತ್ರ ಬಹಳ ಮಹತ್ವದಾಗಿದೆ. ಈ ವರ್ಷ ತುಂಗಭದ್ರಾ ಡ್ಯಾಂನಲ್ಲಿ ಕಳೆದ ವರ್ಷಕ್ಕಿಂತ ನೀರು ಈಗ ಕಡಿಮೆ ಇದೆ ಎಂದು ಹೇಳಿದರು.ಸಭೆಯಲ್ಲಿ 2026–27ನೇ ಸಾಲಿನ ಕೃಷಿ ಚಟುವಟಿ–ಕೆಗಳ ಮಾಹಿತಿ ಪಡೆದ ಜಿಲ್ಲಾಧಿಕಾ–ರಿಗಳು ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳ ಕೊರತೆಯಾಗದಂತೆ ಕೃಷಿ ಇಲಾಖೆಯ ಅಧಿಕಾರಿಗಳು ಮುಂಜಾಗ್ರತೆ ವಹಿಸಬೇಕು. ಆಯಾ ತಾಲ್ಲೂಕಿನ ರಸಗೊಬ್ಬರ ಅಂಗಡಿಗಳಿಗೆ ಕೃಷಿ ಅಧಿಕಾರಿಗಳು ಭೇಟಿ ನೀಡಿ ಅಲ್ಲಿನ ಬೀಜ ಹಾಗೂ ರಸಗೊಬ್ಬರ ಮಾಹಿತಿ ಪಡೆಯಬೇಕು. ಪಂಚಾಯತ ವ್ಯಾಪ್ತಿಯಲ್ಲಿ ರೈತರಿಗೆ ಇನ್ಶೂರೆನ್ಸ ಮಾಡಿಸುವ ಕುರಿತು ಅವರಿಗೆ ಮಾಹಿತಿ ನೀಡಬೇಕು. ಮತ್ತು ಜಿಲ್ಲೆಯಲ್ಲಿ ಬರುವ ದಿನಗಳಲ್ಲಿ ಯಾವುದೇ ರೀತಿಯಲ್ಲಿ ಮಳೆ ಹಾನಿಯಾದರೆ ತಕ್ಷಣವೇ ಕ್ರಮವಹಿಸಬೇಕೆಂದು ಸಂಬಂಧಿಸಿದ ಇಲಾಖೆಯ ಅಧಿಕಾ–ರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ ಅವರು ಮಾತನಾಡಿ, ಇನ್ನೂ ಜಿಲ್ಲೆಯ ಸುಮಾರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಖಾಸಗಿ ಬೋರವೆಲ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಟಾಸ್ಕಪೋರ್ಸ್ ಅನುದಾನ ರಿಲೀಸ್ ಆಗಿರುವುದರಿಂದ ಯಾವುದೇ ಕುಡಿಯುವ ನೀರಿನ ಬಿಲ್ ಬಾಕಿ ಇರಬಾರದು ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಟಾಸ್ಕಪೋರ್ಸ ಸಭೆಗಳನ್ನು ಮಾಡಬೇಕು. ತಮ್ಮ ಟಾಸ್ಕಪೋರ್ಸ ಪ್ರೊಗ್ರೆಸ್ ಬಹಳ ಕಡಿಮೆ ಇದೆ. ಸುಮಾರು ಪಂಚಾಯತಿ ವ್ಯಾಪ್ತಿಗಳಲ್ಲಿ ಟಿ.ಸಿ ಮತ್ತು ಮೋಟರ್ ಸುಟ್ಟು ಹೋಗಿವೆ. ಎಂಬ ದೂರುಗಳಿದ್ದು, ಅವುಗಳು ಸರಿಯಾಗಿ ರಿಪೇ–ರಿಯಾಗುತ್ತಿಲ್ಲ. ಜೆಸ್ಕಾಂ ಅಧಿಕಾರಿಗಳು ಈ ಕುರಿತು ಗಮನಗರಿಸಬೇಕೆಂದು ಸೂಚಿಸಿದರು. ಸಭೆಯಲ್ಲಿ ರಾಯಚೂರು ವಿಭಾಗದ ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಲಿಂಗಸಗೂರು ವಿಭಾಗದ ಸಹಾಯಕ ಆಯುಕ್ತ ಬಸವೇಣ್ಣಪ್ಪ ಕಲಶೆಟ್ಟಿ, ಅರಣ್ಯ ಇಲಾಖೆ ಜಿಲ್ಲಾ ಅಧಿಕಾರಿ ಪ್ರವೀಣ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಪ್ರಕಾಶ್ ಚೌವಣ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿರೇಶ ನಾಯಕ, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ, ರಾಯಚೂರು ಮಹಾನಗರ ಪಾಲಿಕೆಯ ಸದಸ್ಯ ಕಾರ್ಯದರ್ಶಿ ಕೃಷ್ಣ ಸೇರಿದಂತೆ ವಿವಿಧ ತಾಲೂಕಿನ ತಹಶೀಲ್ದರರು, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಸೇ–ರಿದಂತೆ ವಿವಿಧ ಇಲಾಖೆಯ ಅಧಿಕಾ–ರಿಗಳು, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

## ಬಸ್ ನಿಲ್ದಾಣದಲ್ಲಿ ವಿಕಲಚೇತನರಿಗೆ ಮೂಲಭೂತ ಸೌಕರ್ಯ ಒದಗಿಸಲು ಒತ್ತಾಯ

◆ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು ಬಸ ನಿಲ್ದಾಣದಲ್ಲಿ ವಿಕಲಚೇತನರಿಗೆ ಮೂಲಭೂತ ಸೌಕರ್ಯ ಹಾಗೂ ವಿಕಲಚೇತನರಿಗೆ ಅನುಕೂಲವಾಗುವ ಸಲಕರಣೆ ಒದಗಿಸಬೇಕು ಎಂದು ಒತ್ತಾಯಿಸಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಲಿಂಗಸಗೂರು ಘಟಕ ವ್ಯವಸ್ಥಾಪಕ ಪಿ.ಲಕ್ಷ್ಮಣ ಅವರಿಗೆ ಕರ್ನಾಟಕ ರಾಜ್ಯ ವಿಕಲಚೇತನರ ಆರ್ ಪಿ ಡಿ ಟಾಸ್ಕ ಪೋರ್ಸ ರಾಜ್ಯಧ್ಯಕ್ಷರಾದ ಸುರೇಶ ಭಂಡಾರಿ ನೇತೃತ್ವದಲ್ಲಿ ವಿಕಲಚೇತನರು ಮನವಿ ಸಲ್ಲಿಸಿದರು. ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಕಾಯ್ದೆ 2016 ರ ಸೆಕ್ಷನ್ 40 ರನ್ವಯ ಎಲ್ಲಾ ಸರ್ಕಾರಿ ಕಟ್ಟಡಗಳು. ಶಾಲಾ ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳು ವಿಕಲಚೇತನ ವ್ಯಕ್ತಿಗಳ ಸ್ನೇಹಿಯಾಗಿರಬೇಕು. ಮತ್ತು ಅದಕ್ಕೆ ಪೂರಕವಾದ ವೈಜ್ಞಾನಿಕ ಕ್ಯಾಂಪ್, ರೈಲಿಂಗ್, ವಿಲ್ ಚೇರ್, ಸ್ನೇಹಿ ಶೌಚಾಲಯಗಳು ಸೇರಿದಂತೆ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು ಸರ್ಕಾರದ ಮುಖ್ಯ ಜವಾಬ್ದಾರಿಯಾಗಿದ್ದು ಇದನ್ನು ಖಾತರಿ ಪಡಿಸಬೇಕಾಗಿದೆ ಎಂದು ಒತ್ತಾಯಿಸಿರುವರು. ಸುಲಭ ಪ್ರವೇಶ ಮಾಡಲು ವೈಜ್ಞಾನಿಕ ರೀತಿಯಲ್ಲಿ ರೈಲಿಂಗ್ ಸಹಿತ ಬ್ಯಾಂಡ್‌ಗಳನ್ನು ನಿರ್ಮಾಣ ಮಾಡಬೇಕು, ನಿಲ್ದಾಣದಲ್ಲಿ ಕನಿಷ್ಠ 2 ವೀಲ್ ಚೇರ್‌ಗಳನ್ನು ಇಡಬೇಕು. ಬಸ್ ನಿಲ್ದಾಣದಲ್ಲಿ ವಿಕಲಚೇತವರಿಗೆ ಪ್ರತ್ಯೇಕ ಸ್ನೇಹಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು ಹಾಗೂ ಇತರೆ ಬೇಡಿಕೆಗಳನ್ನು ಈಡೆರಿಸಲು ಒತ್ತಾಯಿಸಿರುವರು. ಈ ಸಂದರ್ಭದಲ್ಲಿ ತಾಲೂಕು ಅಧ್ಯಕ್ಷ ಅಜಮಲ್ ಅಹಮದ ಮುದಗಲ್ , ಅಮರೇಶ ಪಾಟೀಲ್ ಐದಬಾವಿ, ಹುಸೇನಸಾಬ, ನಾಗರಾಜ, ವೀರುಪಾಕ್ಷಯ್ಯ ಹಿರೆಮಠ,ದೇವಪ್ಪ, ತಿಪ್ಪಣ್ಣ, ಹುಲಗಪ್ಪ ಈಚನಾಳ, ಯಲ್ಲಪ್ಪ ನಾಗಲಾಪೂರ ಸೇರಿದಂತೆ ಇತರರು ಇದ್ದರು

## ಅಂತರಾಷ್ಟ್ರೀಯ ಯೋಗ ದಿನಾಚರಣೆ : ವಕೀಲರ ಸಭಾಂಗಣದಲ್ಲಿ ಯೋಗೋತ್ಸವ

◆ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು : ಜೂ 22 – ವಿಶ್ವದಾದ್ಯಂತ ಅಂತರಾಷ್ಟ್ರೀಯ ಯೋಗ ದಿನಾಚರಣೆ ಆಚ–ರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪಟ್ಟಣದ ವಕೀಲರ ಸಭಾಂಗಣದಲ್ಲಿ ತಾಲೂಕ ಕಾನೂನು ಸೇವಾ ಸಮಿತಿ , ತಾಲೂಕ ನ್ಯಾಯವಾದಿಗಳ ಸಂಘ ಮತ್ತು ಓಂ ಯೋಗ ಚಿಕಿತ್ಸ ಕೇಂದ್ರ ಇವರುಗಳ ಸಂಂ–ಯುಕ್ತಶ್ರಯದಲ್ಲಿ ಯೋಗಾಭ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದ್ದು, ಉತ್ಸಾಹದಿಂದ ಬೆಳಗ್ಗೆ ನ್ಯಾಯದೀಶರು ಮತ್ತು ವಕೀಲರು ಭಾಗವಹಿಸಿ ಯೋಗದ ಮಹತ್ವ ಜೊತೆಗೆ, ನಿಯಮಿತ ಯೋಗಾಭ್ಯಾಸದಿಂದ ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ, ಏಕಾಗ್ರತೆ ಹಾಗೂ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ ಎಂಬ ಮಾಹಿತಿಯನ್ನೂ ಪಡೆದು ಕೊಂಡರು . ಇನ್ನು ಈ ಯೋಗ ಕಾರ್ಯಕ್ರಮದಲ್ಲಿ ನ್ಯಾಯದೀಶರು



ಹಾಗೂ ವಕೀಲರು ಉತ್ಸಾಹದಿಂದ ವಿವಿಧ ಯೋಗಾಸನವನ್ನು ಮಾಡಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣ ವಾಗಿ ಆಚರಿಸಿದರು . ಅಷ್ಟೇ ಅಲ್ಲದೆ ಯೋಗದಿಂದಾಗುವ ಉಪಯೋಗಗಳು ಯೋಗಗುರು ಬಸವಲಿಂಗಯ್ಯ ಹಿರೇಮಠ್ ತಿಳಿಸಿದರು . ಈ ಸಂದರ್ಭದಲ್ಲಿ ಉಂಡಿ ಮಂಜುಳಾ ಶಿವಪ್ಪ ಹಿರಿಯ ಶ್ರೇಣಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯದೀಶರು ಹಾಗೂ ಅಧ್ಯಕ್ಷರು ಕಾನೂನು ಸೇವಾ ಸಮಿತಿ , ಅಂಬಣ್ಣ. ಕೆ ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯದೀಶರು ಹಾಗೂ ಸದಸ್ಯ ಕಾರ್ಯದರ್ಶಿ ಕಾನೂನು ಸೇವಾ ಸಮಿತಿ , ಭೂಪನಗೌಡ ವಿ ಪಾಟೀಲ್ ಅಧ್ಯಕ್ಷರು ತಾಲೂಕ ನ್ಯಾಯವಾದಿಗಳ ಸಂಘ , ಸಿದ್ರಾಮ ರೆಡ್ಡಿ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯದೀಶರು , ಬಸವಲಿಂಗಯ್ಯ ವಸ್ತ್ರದ್ ತಾಲೂಕ ನ್ಯಾಯವಾದಿಗಳ ಸಂಘ , ಬಾಲರಾಜ್ ಸಾಗರ್ ಮಾನಮಟ್ಟಿ ಕಾರ್ಯದರ್ಶಿ ತಾಲೂಕ ನ್ಯಾಯವಾದಿಗಳ ಸಂಘ , ದೇವೇಂದ್ರ ನಾಯ್ಕ್ ಸಹ – ಕಾರ್ಯದರ್ಶಿಗಳು ತಾಲೂಕ ನ್ಯಾಯವಾದಿಗಳ ಸಂಘ , ಹನುಮಂತ ರೆಡ್ಡಿ ಖಜಾಂಚಿ ತಾಲೂಕ ನ್ಯಾಯವಾದಿಗಳ ಸಂಘ ಹಾಗೂ ನ್ಯಾಯಾಲಯದ ಸಿಬ್ಬಂದಿ ಫೇನಲ್ ವಕೀಲರು ಇದ್ದರು.

## ಕಲ್ಯಾಣ ಕರ್ನಾಟಕ ಲೀಡರ್ ಅವಾರ್ಡ್–2025

### ಕೆಪಿಸಿಸಿ ಎಸ್ಟಿ ಘಟಕದ ಪ್ರಧಾನ ಕಾರ್ಯದರ್ಶಿ ಆರ್. ಸಿದ್ದನಗೌಡಗೆ ಪ್ರಥಮ ಸ್ಥಾನ

◆ ನೈಜ್ಯ ದೆಸೆ ನ್ಯೂಸ್

ತುರ್ವಿಹಾಳ, ಜೂನ್ 21: ಕರ್ನಾಟಕ ಟಿವಿ ಖಾಸಗಿ ವಾಹಿನಿ ಆಯೋಜಿಸಿದ್ದ ಪ್ರತಿಷ್ಠಿತ 'ಕಲ್ಯಾಣ ಕರ್ನಾಟಕ ಲೀಡರ್ ಅವಾರ್ಡ್–2025' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕೆಪಿಸಿಸಿ ಎಸ್ಟಿ ಘಟಕದ ಪ್ರಧಾನ ಕಾರ್ಯದರ್ಶಿ ಆರ್. ಸಿದ್ದನಗೌಡ ಅವರು ಪ್ರಥಮ ಸ್ಥಾನ ಪಡೆದು ಪ್ರಶಸ್ತಿಗೆ ಭಾಜನರಾಗಿದ್ದಾರೆ. ರಾಜ್ಯದ ಸಚಿವರಾದ ಕೃಷ್ಣಬೈರೇಗೌಡ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.ಕಲ್ಯಾಣ ಕರ್ನಾಟಕ ಭಾಗದಲ್ಲಿ ಯುವ ನಾಯಕತ್ವ, ಜನಪರ ಚಟುವಟಿಕೆಗಳು ಹಾಗೂ ಸಾಮಾಜಿಕ ಸೇವೆಯಲ್ಲಿ ತೊಡಗಿರುವ ಯುವ ರಾಜಕಾರಣಿಗಳನ್ನು ಗುರುತಿಸುವ ಉದ್ದೇಶದಿಂದ ಕರ್ನಾಟಕ ಟಿವಿ ವಾಹಿನಿಯು ಈ





ಪ್ರಶಸ್ತಿಯನ್ನು ಆಯೋಜಿಸಿತ್ತು. ಕಳೆದ ಮಾರ್ಚ್ ತಿಂಗಳಲ್ಲಿ ನಡೆದ ಆನ್‌ಲೈನ್ ಮತದಾನ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಹಾಗೂ ಯುವ ಮತದಾರರಿಂದ ಆರ್. ಸಿದ್ದನಗೌಡ ಅವರಿಗೆ ಅಪಾರ ಬೆಂಬಲ ದೊರೆಯಿತು. ಬೆಂಗಳೂರಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಚಿವ ಕೃಷ್ಣಬೈರೇಗೌಡ ಅವರು ಮಾತನಾಡಿ, ಯುವ ನಾಯಕರು ಸಮಾಜದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕು ಎಂದು ಹೇಳಿದರು. ಆರ್. ಸಿದ್ದನಗೌಡ ಅವರ ಜನಸೇವೆ ಮತ್ತು ಸಂಘಟನಾ ಸಾಮರ್ಥ್ಯವನ್ನು ಪ್ರಶಂಸಿಸಿದರು.ಪ್ರಶಸ್ತಿ ಸ್ವೀಕರಿಸಿದ ನಂತರ ಮಾತನಾಡಿದ ಆರ್. ಸಿದ್ದನಗೌಡ ಅವರು,"ಈ ಪ್ರಶಸ್ತಿ ನನಗೆ ಮತ್ತಷ್ಟು ಜವಾಬ್ದಾರಿ ನೀಡಿದೆ. ನನ್ನ ಕಾರ್ಯಗಳನ್ನು ಗುರುತಿಸಿ ಪ್ರೋತ್ಸಾಹಿಸಿದ ಕರ್ನಾಟಕ ಟಿವಿ ವಾಹಿನಿಗೆ ಹಾಗೂ ನನ್ನ ಮೇಲೆ ವಿಶ್ವಾಸವಿಟ್ಟು ಬೆಂಬಲಿಸಿದ ಎಲ್ಲಾ ಮತದಾರರು, ಯುವ ಸ್ನೇಹಿತರು ಮತ್ತು ಹಿತೈಷಿಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು. ಜನರ ಸಮಸ್ಯೆಗಳಿಗೆ ಸ್ಪಂದಿಸಿ, ನಮ್ಮ ಭಾಗದ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತೇನೆ" ಎಂದು ಹೇಳಿದರು.ಆರ್. ಸಿದ್ದನಗೌಡ ಅವರ ಈ ಸಾಧನೆಗೆ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಕ್ಷೇತ್ರಗಳ ಗಣ್ಯರು ಅಭಿನಂದನೆ ಸಲ್ಲಿಸಿದರು. ಸಿಂಧನೂರು, ಮಸ್ಕಿ ಹಾಗೂ ಮಾನ್ವಿ ತಾಲೂಕುಗಳಿಂದ ಆಗಮಿಸಿದ್ದ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಶುಭಾಶಯ ಕೋರಿದರು.ಈ ಪ್ರಶಸ್ತಿಯು ಕಲ್ಯಾಣ ಕರ್ನಾಟಕ ಭಾಗದಲ್ಲಿ ಯುವ ನಾಯಕತ್ವಕ್ಕೆ ದೊರೆತ ಗೌರವವಾಗಿದ್ದು, ಮುಂದಿನ ದಿನಗಳಲ್ಲಿ ಯುವ ಜನತೆಗೆ ಪ್ರೇರಣೆಯಾಗಲಿದೆ ಎಂದು ಅಭಿಮಾನಿಗಳು ಅಭಿಪ್ರಾಯಪಟ್ಟರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### LLM (Master of Laws)

ಕಾನೂನು ಶಿಕ್ಷಣದಲ್ಲಿ ಉನ್ನತ ವ್ಯಾಸಂಗ ಮಾಡಲು ಬಯಸುವವರಿಗೆ LLM (Master of Laws) ಅತ್ಯಂತ ಜನಪ್ರಿಯ ಸ್ನಾತಕೋತ್ತರ ಕೋರ್ಸ್ ಆಗಿದೆ. ಇದು 1 ಅಥವಾ 2 ವರ್ಷಗಳ ಅವಧಿಯ ಕೋರ್ಸ್ ಆಗಿದ್ದು, ಕಾನೂನಿನ ನಿರ್ದಿಷ್ಟ ವಿಷಯಗಳಲ್ಲಿ ಪರಿಣತಿ (Specialization) ಪಡೆಯಲು ಅವಕಾಶ ನೀಡುತ್ತದೆ.ಐಐಒ ಕೋರ್ಸ್‌ನ ಪ್ರಮುಖ ವಿವರಗಳು:ಕೋರ್ಸ್‌ನ ಪೂರ್ಣ ಹೆಸರು: Master of Laws (ಮಾಸ್ಟರ್ ಆಫ್ ಲಾಸ್)ಅವಧಿ: ಭಾರತದಲ್ಲಿ ಇದು 1 ರಿಂದ 2 ವರ್ಷಗಳ ಅವಧಿಯನ್ನು ಹೊಂದಿರುತ್ತದೆ. (ಸಾಮಾನ್ಯವಾಗಿ 2 ವರ್ಷಗಳ ಕೋರ್ಸ್ ಹೆಚ್ಚು ಪ್ರಚಲಿತದಲ್ಲಿದೆ).ಅರ್ಹತೆ: ಎಲ್‌ಎಲ್‌ಬಿ (LLB - Bachelor of Laws) ಪದವಿಯನ್ನು ಪೂರ್ಣಗೊಳಿಸಿರಬೇಕು.ಪ್ರವೇಶ ಪರೀಕ್ಷೆಗಳು: CLAT PG, LSAT India, ಅಥವಾ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ (KSLU) ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದು.ಪ್ರಮುಖ ವಿಶೇಷತೆಗಳು (Specializations): ಕಾರ್ಪೊರೇಟ್ ಕಾನೂನು, ಕ್ರಿಮಿನಲ್ ಕಾನೂನು, ಸೈಬರ್ ಕಾನೂನು, ಅಂತರರಾಷ್ಟ್ರೀಯ ಕಾನೂನು, ಸಂವಿಧಾನಾತ್ಮಕ ಕಾನೂನು ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು (IPR).ಕರ್ನಾಟಕದಲ್ಲಿನ ಪ್ರಮುಖ ಕಾಲೇಜುಗಳು: NLSIU (ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ), ಬೆಂಗಳೂರು KSLU (ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ), ಹುಬ್ಬಳ್ಳಿಐಐಒ ಕೋರ್ಸ್ ಮುಗಿದ ನಂತರ ವಕೀಲರಾಗಿ, ಕಾನೂನು ಸಲಹೆಗಾರರಾಗಿ (Legal Advisor), ಕಾನೂನು ಸಂಶೋಧಕರಾಗಿ ಅಥವಾ ಪ್ರಾಧ್ಯಾಪಕರಾಗಿ ಕೆಲಸ ಮಾಡಲು ಉತ್ತಮ ಉದ್ಯೋಗಾವಕಾಶಗಳಿವೆ.

## ಮೂರ್ತಿಯ ಭವ್ಯ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್



ಕಿತ್ತೂರು ಚೆನ್ನಮ್ಮ ತಾಳಿಕೋಟಿ: ಪಟ್ಟಣದ ಕಿತ್ತೂರು ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನಾ ಸೇವಾ ಸಮಿತಿ ವತಿಯಿಂದ ಚೆನ್ನಮ್ಮಳ ಕಂಚಿನ ಮೂರ್ತಿಯು ಭವ್ಯ ಮೆರವಣಿಗೆಯೊಂದಿಗೆ ರಾಜವಾಡೆ ಆವರಣದಲ್ಲಿ ರವಿವಾರ ಪ್ರತಿಷ್ಠಾಪನೆಗೊಂಡಿತು. ಮೂರ್ತಿ ಪ್ರತಿಷ್ಠಾಪನೆ ಮಾಡುವ ಪೂರ್ವ ಪಟ್ಟಣದ ಬಸವೇಶ್ವರ ವೃತ್ತದಲ್ಲಿರುವ ಶ್ರೀ ಬಸವೇಶ್ವರ ಮೂರ್ತಿಗೆ ಮಾಲಾರ್ಪಣೆ ಮಾಡುವುದರೊಂದಿಗೆ ಚೆನ್ನಮ್ಮಳ ಕಂಚಿನ ಮೂರ್ತಿಯ ಭವ್ಯ ಮೆರವಣಿಗೆಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ ಮನಗೂಳಿಯ ಪೂಜ್ಯಶ್ರೀ ವೀರತಿಶಾನಂದ ಮಹಾಸ್ವಾಮಿಗಳು ಮಾತನಾಡಿ ತಾಳಿಕೋಟಿ ಪಟ್ಟಣದಲ್ಲಿ ಚೆನ್ನಮ್ಮಾಜಿಯ ಸುಂದರವಾದ ಪುತ್ಥಳಿಯನ್ನು ಪ್ರತಿಷ್ಠಾಪಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಚೆನ್ನಮ್ಮಾಜಿಯ ಶೌರ್ಯ ಪರಾಕ್ರಮ ಹಾಗೂ ದೇಶಾಭಿಮಾನ ನಮಗೆಲ್ಲರಿಗೂ ಮಾದರಿಯಾಗಬೇಕಾಗಿದೆ ಇಂತಹ ಪುಣ್ಯದ ಕೆಲಸವನ್ನು ಮಾಡಿದ ಸಮಿತಿಯ ಅಧ್ಯಕ್ಷರಾದ ನೀಲಮ್ಮಗೌಡತಿ ಪಾಟೀಲ ಹಾಗೂ ಅವರ ಪದಾಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದರು. ಹಿಕ್ಕನಗುತ್ತಿಯ ಪೂಜ್ಯ ಪ್ರಭುಲಿಂಗ ಮಹಾಸ್ವಾಮಿಗಳು ಹಾಗೂ ಜೈನಾಪುರದ ಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ಮೆರವಣಿಗೆ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ಸಮಿತಿಯ ಅಧ್ಯಕ್ಷರಾದ ನೀಲಮ್ಮಗೌಡತಿ ಪಾಟೀಲ ನೇತೃತ್ವ ವಹಿಸಿದ್ದರು. ಶ್ರೀ ಬಸವೇಶ್ವರ ವೃತ್ಸವದಿಂದ ಸಕಲ ವಾದ್ಯ ಮೇಳಗಳೊಂದಿಗೆ ಆರಂಭವಾದ ಶ್ರೀ ಚೆನ್ನಮ್ಮಾಜಿ ಕಂಚಿನ ಮೂರ್ತಿಯ ಮೆರವಣಿಗೆಯು ಬಸ್ ನಿಲ್ದಾಣ ಮಾರ್ಗ, ಮಹಾರಣಾ ಪ್ರತಾಪ ಸಿಂಹ ವೃತ್ತ, ಶಿವಾಜಿ ವೃತ್ತ, ಕತ್ರಿ ಬಜಾರ್ ಮಾರ್ಗವಾಗಿ ಪ್ರತಿಷ್ಠಾಪನಾ ಸ್ಥಳವಾದ ರಾಜವಾಡೆ ಆವರಣಕ್ಕೆ ತಲುಪಿತು. ಅಲ್ಲಿ ನಾಡಿನ ಹರ ಚರ ಗುರುಮೂರ್ತಿಗಳ ಸಮ್ಮುಖದಲ್ಲಿ ಲಿಂಗಾಯತ ಧರ್ಮದ ವಿಧಿ ವಿಧಾನಗಳನ್ನು ಪೂರೈಸಿದ ನಂತರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಕಾರ್ಯಕ್ರಮದಲ್ಲಿ ಮೂರ್ತಿ ಪ್ರತಿಷ್ಠಾಪನಾ ಸಮಿತಿಯ ಗೌರವ ಅಧ್ಯಕ್ಷರಾದ ಚಂದ್ರಶೇಖರ ಪಾಟೀಲ, ಶ್ರೀ ಬಸವೇಶ್ವರ ಉತ್ಸವ ಸಮಿತಿ ಅಧ್ಯಕ್ಷ ಮಹಾಂತೇಶ ಮುರಾಳ, ಚಂದ್ರಶೇಖರಯ್ಯ ಮಠಪತಿ, ಮಹದೇವಪ್ಪ ಪಾಟೀಲ, ಬಸವರಾಜ ಕಾಟಾಪೂರ, ವಿಶ್ವನಾಥ ಪಾಟೀಲ, ಅಶೋಕ ಚಿನಗುಡಿ, ಭೀಮು ಸುಳೇಭಾವಿ, ರೇಣುಕಾ ಪಾಟೀಲ, ಅಂಬಿಕಾ ಪಾಟೀಲ, ಕಾಶಿಬಾಯಿ ಶರಣರ, ವಿದ್ಯಾ ವಿಶ್ವನಾಥ ಪಾಟೀಲ, ಬಸವರಾಜ ಅರಸನಾಳ(ಬಿಳೆಭಾವಿ), ಮಲ್ಲಣ್ಣ ಪೂಜಾರಿ, ದೇವಣ್ಣ ಕಡಕಲ್,ಗಂಗಾಧರ ಬಿರಾದಾರ, ಸಮಿತಿಯ ಪದಾಧಿಕಾರಿಗಳು, ವಿವಿಧ ಮಹಿಳಾ ಸಂಘ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಚೆನ್ನಮ್ಮಾಜಿಯ ಅಭಿಮಾನಿಗಳು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದರು.







# "ಅಮ್ಮ" ಫೌಂಡೇಶನ್ ಉದ್ಘಾಟನೆ ನಾಳೆ

ನೈಜ್ಯ ದೆಸೆ ನ್ಯೂಸ್



ತಾಳಿಕೋಟೆ: 'ಅಮ್ಮ' ಸರ್ಕಾರೇತರ -ಲಾಭರಹಿತ ಸಂಸ್ಥೆಯಾಗಿದ್ದು, ಸಮಾನ ಮನಸ್ಕ ಮಹಿಳೆಯರು ಸೇರಿಕೊಂಡು ಮಹಿಳಾ ಸಂಘಟನೆ, ಹಾಗೂ ಸಾಮಾಜಿಕ ಕಳಕಳಿಯ ಉದ್ದೇಶದಿಂದ ಸಂಘಟನೆ ಮಾಡಲಾಗಿದ್ದು ಪಟ್ಟಣದ ಸರ್ವರೂ ನಮ್ಮೊಂದಿಗೆ ಕೈ ಜೋಡಿಸಿ ತನುಮನಧನದಿಂದ ನೆರವಾಗಬೇಕು ಎಂದು ಇದೇ ಜೂ.23 ರಂದು ಅಸ್ತಿತ್ವಕ್ಕೆ ಬರುತ್ತಿರುವ 'ಅಮ್ಮ' ಫೌಂಡೇಶನ್ ನ ನಿಯೋಜಿತ ಅಧ್ಯಕ್ಷೆ ಬಸಮ್ಮ ಕಾಶಿರಾಯ ಮಣ್ಣೂರ ಮನವಿ ಮಾಡಿದರು. ಅವರು ಪಟ್ಟಣದ ಖಾಸ್ಗತೇಶ್ವರ ಸಭಾಭವನದ ಹೊರ ಆವರಣದಲ್ಲಿ ನಡೆದ 'ಅಮ್ಮ' ಫೌಂಡೇಶನ್ ಉದ್ಘಾಟನಾ ಸಮಾರಂಭದ ಪೂರ್ವಭಾವಿ ಸಭೆಯಲ್ಲಿ ಶನಿವಾರ ಸಂಜೆ ಮಾತನಾಡಿದರು.ನಿಯೋಜಿತ ಕಾರ್ಯದರ್ಶಿ ಸುಮಂಗಲಾ ಕೋಳೂರ ಮಾತನಾಡಿ ಮಹಿಳೆಯರ ಆರ್ಥಿಕ ಸ್ವಾವಲಂಬನೆ, ಹಾಗೂ ಮಹಿಳಾ ಸಬಲೀಕರಣಕ್ಕಾಗಿ 'ಅಮ್ಮ' ಫೌಂಡೇಶನ್ ಪ್ರಾರಂಭಿಸಲಾಗಿದೆ . ಜೂ.23ರಂದು ಸ್ಥಳೀಯ ಖಾಸ್ಗತೇಶ್ವರ ಸಭಾಭವನದಲ್ಲಿ ಬೆಳಿಗ್ಗೆ 11.00 ಗಂಟೆಗೆ ಉದ್ಘಾಟನಾ ಸಮಾರಂಭ ನೆರವೇರಲಿದೆ. ಆರಂಭದಲ್ಲಿ ಅಮ್ಮಂದಿರ ಪಾದಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ ಎಂದರು.ದಿವ್ಯ ಸಾನಿಧ್ಯವನ್ನು ಖಾಸ್ಗತೇಶ್ವರ ಮಠದ ಪೀಠಾಧಿಪತಿ ಸಿದ್ದಲಿಂಗ ದೇವರು ವಹಿಸಿದರೆ,ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ ಬೆಂಗಳೂರಿನ ಡಾ. ನಾಗಲಕ್ಷ್ಮೀ ಚೌಧರಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.ಮುಖ್ಯ ಅತಿಥಿಗಳಾಗಿ ಮುದ್ದೇಬಿಹಾಳ ಮತಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಸಾಬೂನು ಹಾಗೂ ಮಾರ್ಜಕ ನಿಗಮ ನಿಯಮಿತ ಕರ್ನಾಟಕ ಸರ್ಕಾರ ಅಧ್ಯಕ್ಷರಾದ ಸಿ.ಎಸ್. ನಾಡಗೌಡ (ಅಪ್ಪಾಜಿ),ಸಂಸದ ರಮೇಶ ಜಿಗಜಿಣಗಿ, ದೇವರ ಹಿಪ್ಪರಗಿ ಮತಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ (ಕು.ಸಾಲವಾಡಗಿ), ಮಾಜಿ ಶಾಕರುಗಳಾದ ಶಿವಪುತ್ರಪ್ಪ. ಎಂ. ದೇಸಾಯಿ ಸಾಸನೂರ, ಎ.ಎಸ್. ಪಾಟೀಲ (ನಡಹಳ್ಳಿ), ಸೋಮನಗೌಡ ಬಿ.ಪಾಟೀಲ ಸಾಸನೂರ ಉಪಸ್ಥಿತರಿರುವರು, ಅಧ್ಯಕ್ಷತೆಯನ್ನು ನಿಯೋಜಿತ ಅಧ್ಯಕ್ಷೆ ಬಸಮ್ಮ ಕಾಶಿರಾಯ ಮಣ್ಣೂರ ವಹಿಸುವರು ಎಂದು ತಿಳಿಸಿದರು. ಅನಿತಾ ಸಜ್ಜನ ವಂದಿಸಿದರು.ಈ ಸಂದರ್ಭದಲ್ಲಿ ನಿವೃತ್ತ ಪೌರಾಯುಕ್ತ, ಬಿ.ಎ.ಶಿಂಧೆ, ಎಸ್.ಎಸ್.ವಿದ್ಯಾಸಂಸ್ಥೆಯ ಅಧ್ಯಕ್ಷ ಎಚ್.ಎಸ್.ಪಾಟೀಲ, ಶ್ರೀಕಾಂತ ಪತ್ತಾರ, ಇತರರು ಮಾತನಾಡಿದರು. ಮುರುಗೇಶ ವಿರಕ್ತಮಠ, ಘನಮಠೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎಂ.ಸಜ್ಜನ ಗಂಗಾಧರ ಕಸ್ತೂರಿ, ಪಟ್ಟಣದ ಪ್ರಮುಖರು, ಕಾರ್ಯಕಾರಿಣಿ ಸಮಿತಿ ಸದಸ್ಯರು ಇತರ ಪ್ರಮುಖರು ಇದ್ದರು.

# ರಾಮಲಿಂಗಯ್ಯ ಶ್ರೀಗಳಿಗೆ ಗೌರವ ಸಮರ್ಪಣೆ



ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದಲ್ಲಿ ಶ್ರೀ ವೀರ ರಾಣಿ ಕಿತ್ತೂರು ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನಾ ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡ ಹತ್ತನೇ ದಿನದ ಪುರಾಣ ಕಾರ್ಯಕ್ರಮದಲ್ಲಿ ಜ್ಯೋತಿಷ್ಯ ರತ್ನ ಚಬನೂರು ಹಿರೇಮಠದ ಪರಮಪೂಜ್ಯ ರಾಮಲಿಂಗಯ್ಯ ಮಹಾಸ್ವಾಮಿಗಳಿಗೆ ಸಮಿತಿ ವತಿಯಿಂದ ಗೌರವ ಸಮರ್ಪಣೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಪುರಾಣಿಕ ಮ.ನಿ.ಪ್ರ. ಶ್ರೀ ಪ್ರಭುಲಿಂಗ ಮಹಾಸ್ವಾಮಿಗಳು, ಸಮಿತಿ ಅಧ್ಯಕ್ಷರಾದ ನೀಲಮ್ಮಗೌಡತಿ ಪಾಟೀಲ, ಪದಾಧಿಕಾರಿಗಳಾದ ಚಂದ್ರಶೇಖರಯ್ಯ ಮಠಪತಿ, ರೇಣುಕಾ ಪಾಟೀಲ, ಅಂಬಿಕಾ ಪಾಟೀಲ,ಕಾಶಿಬಾಯಿ ಶರಣರ, ಮಹದೇವಪ್ಪ ಪಾಟೀಲ ಮಿಣಜಗಿ, ಬಸವರಾಜ ಕಾಟಾಪೂರ, ವಿಶ್ವನಾಥ ಪಾಟೀಲ, ವಿದ್ಯಾ ವಿಶ್ವನಾಥ ಪಾಟೀಲ ಮತ್ತಿತರರು ಇದ್ದರು.

# ಕಾರುಣ್ಯಾಶ್ರಮದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರಿಗೆ ಗೌರವ ಸನ್ಮಾನ



ನೈಜ್ಯ ದೆಸೆ ನ್ಯೂಸ್

ಮಾನ್ವಿ - ಸರ್ವಧರ್ಮ ಸೇವಾ ವೆಲ್ಫೇರ್ ಟ್ರಸ್ಟ್ (ರಿ)ಮಾನ್ವಿ ಬಡವರ ಸೇವಾಕೇಂದ್ರದ ಸಂಸ್ಥಾಪಕರಾದ ಹನುಮಂತ ಕೋಟೆ ಅವರು ತಮ್ಮ ಕಾರ್ಯಾಲಯದಲ್ಲಿ ಸಿಂಧನೂರಿನ ಕರುಣೆಯ ಕಾರುಣ್ಯ ಆಶ್ರಮದ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಅವರನ್ನು ಸನ್ಮಾನಿಸಿ ಗೌರವಿಸಿದರು. ನಂತರ ಹನುಮಂತ ಕೋಟೆ ಮಾತನಾಡಿ ಕರುಣೆಯ ಕಾರುಣ್ಯ ಆಶ್ರಮದ ಡಾ.ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಅವರು ಅಂಗವಿಕಲತೆಯಿಂದ ಬಳಲುತ್ತಿದ್ದರು ಸಹ ತಮ್ಮನ್ನು ತಾವು ಸಮಾಜಕ್ಕಾಗಿ ಅನಾಥರಕ್ಕಾಗಿ ಮತ್ತು ದೀನ ದಲಿತರ ಉದ್ಧಾರಕ್ಕಾಗಿ ಹಲವಾರು ಸಮಾಜ ಪರ ಕಾರ್ಯಗಳನ್ನು ಮಾಡಿದ್ದಾರೆ. ಇಂತಹ ಒಬ್ಬ ಮಹಾನ್ ಪುಣ್ಯಾತ್ಮರ ಆಗಮನದಿಂದಾಗಿ ನಮ್ಮ ಕಾರ್ಯಾಲಯಕ್ಕೆ ಕಳೆ ಬಂದಿದೆ. ಇವರ ನಿರಂತರ ಮಾರ್ಗದರ್ಶನ ಮತ್ತು ಇವರ ಸೇವಾ ಕಾರ್ಯಗಳಲ್ಲಿ ನಾವು ಪಾಲ್ಗೊಳ್ಳುತ್ತಿರುವುದು ನಮಗೆ ಆತ್ಮ ತೃಪ್ತಿ ತಂದಿದೆ. ಈಗಾಗಲೇ ನಮ್ಮ ಮಾನ್ವಿ ಪಟ್ಟಣದಲ್ಲಿ ಆರಂಭಗೊಳ್ಳುತ್ತಿರುವ ಕಾರುಣ್ಯ ನೆರೆಯ ಬಡ ಮಕ್ಕಳ ಅನಾಥ ಮಕ್ಕಳ ಹಾಗೂ ಏಕ ಸದಸ್ಯ ಮಕ್ಕಳ ಶಿಕ್ಷಣ ಆರೋಗ್ಯ ವಸತಿಗಾಗಿ ಹಮ್ಮಿಕೊಂಡಿರುವ ಆಶ್ರಮದ ಕಾರ್ಯಗಳಲ್ಲಿ ನಿರಂತರವಾಗಿ ನಾವೆಲ್ಲಾ ಪಾಲ್ಗೊಂಡು ಕಾರುಣ್ಯ ಸಂಸ್ಥೆಯ ಜೊತೆಗಿರುತ್ತೇವೆ. ಎಂದು ಮಾತನಾಡಿದರು. ನಂತರ ಕಾರುಣ್ಯಾಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಹನುಮಂತ ಕೋಟೆಯುವರು ಬುದ್ಧ ಬಸವ ಅಂಬೇಡ್ಕರ್ ಮತ್ತು ಅಬ್ದುಲ್ ಕಲಾಂ ಹಾಗೂ ಮದರ್ ತೆರೇಸಾ ಇವರುಗಳ ಆದರ್ಶದೊಂದಿಗೆ ಸರ್ವ ಧರ್ಮದ ಹಿತಾಸಕ್ತಿಯನ್ನು ಬಯಸುತ್ತಿರುವ ನಮ್ಮ ಸಹೋದರ ಹನುಮಂತ ಕೋಟೆಯುವರ ಜೊತೆ ನಿರಂತರವಾಗಿರುತ್ತೇವೆ ಎಂದು ಮಾತನಾಡಿ ಅವರ ಸೇವೆಗೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶರಣಪ್ಪ ನಾಯಕ ಕಸಬಾ ಲಿಂಗಸುಗೂರು. ಮಹೇಶ ಕಸಬಾ ಲಿಂಗಸೂಗೂರು ಹಾಗೂ ಇತರರು ಉಪಸ್ಥಿತರಿದ್ದರು.